## ಅಧ್ಯಾಯ 21

# ಒಂದು ನೂತನ ಆಕಾಶಮಂಡಲ ಮತ್ತು ಒಂದು ನೂತನ ಭೂಮಂಡಲ

ಪ್ರಕಟನೆ ಪುಸ್ತಕವು *ನೂತನ* ಸಂಗತಿಗಳಿಂದ ತುಂಬಿರುತ್ತದೆ: "ಹೊಸ ಹೆಸರು" (2:17; 3:12), ಒಂದು "ಹೊಸ ಯೆರೂಸಲೇಮ್" (3:12; ನೋಡಿರಿ 21:2), ಮತ್ತು "ಒಂದು ಹೊಸ ಹಾಡು" (5:9; 14:3). ಈಗ, 21ನೇ ಅಧ್ಯಾಯದಲ್ಲಿ, ನಾವು "ನೂತನಾಕಾಶಮಂಡಲವನ್ನೂ ನೂತನಭೂಮಂಡಲವನ್ನೂ" ಕುರಿತು ಓದುತ್ತೇವೆ (ವ. 1), ಮತ್ತು ಕರ್ತನು ಹೀಗೆ ಘೋಷಣೆ ಮಾಡುವದನ್ನು ನೋಡುತ್ತೇವೆ: "ಇಗೋ, ಎಲ್ಲವನ್ನು ಹೊಸದುಮಾಡುತ್ತೇನೆ" (ವ. 5). ಆ ಕಡೇ ಹೇಳಿಕೆಯಲ್ಲಿ "ನೂತನ" ಎಂಬ ಪದದ ಮೇಲೆ ಒತ್ತು ಕೊಡಲಾಗಿರುತ್ತದೆ; ಮೂಲ ವಾಕ್ಯವು ಅಕ್ಷರಶಃ ಹೀಗೆ ಹೇಳುತ್ತದೆ, "ಇಗೋ, *ಹೊಸದು* ಮಾಡುವೆನು ಎಲ್ಲಾ ಸಂಗತಿಗಳನ್ನು." ಹೊಸ ಒಡಂಬಡಿಕೆಯಲ್ಲಿ ಸ್ವತಃ ದೇವರೇ ಮಾತಾಡಿರುವ ಕೆಲವೇ ಕೆಲವು ಸಂದರ್ಭಗಳಲ್ಲಿ ಇದು ಒಂದಾಗಿದೆ (1:8; 16:1, 17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ); ಸ್ಪಷ್ಟವಾಗಿರುವ ಪ್ರಕಾರ ಆತನ ಮಾತುಗಳು ವಿಶೇಷ ಮಹತ್ವವನ್ನು ನೀಡುವ ಉದ್ದೇಶಕ್ಕಾಗಿ ಇರುತ್ತವೆ.

ಪ್ರಕಟನೆ 21:1-22:5 ವಾಕ್ಯಭಾಗವು ನಾವು ಪರಲೋಕವೆಂದು ಕರೆಯುವ ಸ್ಥಳದ ಕುರಿತು ಹೇಳುತ್ತದೆ. ಕಾಲದಿಂದ ಕಾಲಕ್ಕೆ, ಈ ಅಧ್ಯಾಯಗಳು ಬರೆಯಲ್ಪಡುವದಕ್ಕೆ ಮುಂಚೆ, ಪ್ರೇರಿತ ಲೇಖಕರು ಮನುಷ್ಯರಿಗೆ ಪರಲೋಕದ ಕುರಿತ ಮಿನುಗು ನೋಟಗಳನ್ನು ಒದಗಿಸಿದ್ದರು, ಆದರೆ ಜನರ ಹೃದಯಗಳು ಇನ್ನಷ್ಟು ಬೇಕೆಂದು ಹಂಬಲಿಸುತ್ತಿದ್ದವು. Batsell Barrett Baxterನು ಹೀಗೆ ಬರೆಯುತ್ತಾನೆ,

> ಅಂತಿಮ ಪುಸ್ತಕವಾದ ಪ್ರಕಟನೆ ಹೆಚ್ಚುಕಡಿಮೆ ಸಂಪೂರ್ಣವಾಗಿ ಬರೆಯಲ್ಪಡುವ ಹೊತ್ತಿಗೆ, ಬೈಬಲಿನ ಅರುವತ್ತಾರು ಪುಸ್ತಕಗಳಲ್ಲಿ ಅರುವತ್ತೈದು ಪುಸ್ತಕಗಳು ಪೂರ್ತಿಗೊಂಡಿದ್ದವು, ಆಗ ಬರೆಯಲ್ಪಟ್ಟಿರುವ ಸಕಲ ಕಾಲದ ದೇವರ ವಾಕ್ಯವು ಸರ್ವಕಾಲಕ್ಕೂ ಮುಂದಿಡಲ್ಪಡುವ ಮುನ್ನ ಇನ್ನೂ ಎಂಟು ಪರಿಚ್ಛೇಧಗಳು ಬಾಕಿಯಿರುವ ವೇಳೆ, ದೇವರು ಮನುಷ್ಯನಿಗೆ ಪರಲೋಕದ ಚಿತ್ರಣವನ್ನು ಕೊಡುತ್ತಾನೆ.[1]

21 ಮತ್ತು 22 ಅಧ್ಯಾಯಗಳು ಪ್ರಕಟನೆ ಪುಸ್ತಕದ ಅತ್ಯಂತ ಪರಿಚಿತವಾದ ಭಾಗವಾಗಿವೆ. ಅನೇಕ ಜನರ ಬೈಬಲುಗಳಲ್ಲಿ ಪ್ರಕಟನೆ ಪುಸ್ತಕದ ಆರಂಭಿಕ ಪುಟಗಳು ಬೈಬಲನ್ನು ಹೊಸದಾಗಿ ಖರೀದಿಸಲ್ಪಟ್ಟ ವೇಳೆ ಹೇಗೆ ಹೊಸದಾಗಿ ಸ್ವಚ್ಛವಾಗಿದ್ದವೋ ಅದೇ ರೀತಿಯೇ ಈಗಲೂ ಇರುತ್ತವೆ, ಆದರೆ ಕಡೇ ಎರಡು ಅಧ್ಯಾಯಗಳು ಸತತವಾಗಿ ಓದಲ್ಪಟ್ಟು ಸವೆದು ಹೋಗಿರುತ್ತವೆ - ಮತ್ತು ಬಹುಶಃ ಕಣ್ಣೀರುಗಳಿಂದ ತೊಯ್ದಿರಬಹುದು. ಆ ಅಧ್ಯಾಯಗಳಷ್ಟು ಅಧಿಕವಾಗಿ ಓದಲ್ಪಟ್ಟಿರುವ ಹಾಗೂ ಉಲ್ಲೇಖಿಸಲ್ಪಟ್ಟಿರುವ ವಾಕ್ಯಭಾಗಗಳು ಕೆಲವೇ ಕೆಲವು

ಇರುತ್ತವೆ. ಅವುಗಳಲ್ಲಿ ಯಾವದೂ ಹೃದಯಗಳನ್ನು ಇಷ್ಟೊಂದು ಹೆಚ್ಚಾಗಿ ಸಂತೈಸಿರುವದಿಲ್ಲ.

ವಾಕ್ಯಭಾಗವನ್ನು ವಿವರವಾಗಿ ಅಧ್ಯಯನ ಮಾಡುವದಕ್ಕೆ ಮುನ್ನ, 21 ಮತ್ತು 22 ಅಧ್ಯಾಯಗಳು ಪರಲೋಕದ ಕುರಿತು ಮಾತಾಡುತ್ತವೋ ಅಥವಾ ಇಲ್ಲವೋ ಎಂಬುದನ್ನು ಚರ್ಚಿಸುವದು ಅವಶ್ಯಕವಾಗಿರುತ್ತದೆ. ಕೆಲವೊಬ್ಬ ಸಹಸ್ರವರ್ಷಪೂರ್ವವಾದಿಗಳು ಪ್ರಕಟನೆ 21 ಮತ್ತು 22 ಪುಸ್ತಕದಲ್ಲಿರುವ "ಹೊಸ ಯೆರೂಸಲೇಮ" ಎಂಬುದು ಕಲ್ಪನಾತ್ಮಕವಾದ ಕ್ರಿಸ್ತನ ಸಹಸ್ರವರ್ಷ ಆಳ್ವಿಕೆಗಾಗಿ ನವೀಕರಿಸಲ್ಪಟ್ಟು ಸಿದ್ಧಗೊಂಡಿರುವ ಭೂಲೋಕದ ಫಿಲಿಷ್ಟಿಯ ಪಟ್ಟಣವಾಗಿರುತ್ತದೆಂದು ನಂಬುತ್ತಾರೆ. "ಯೆರೂಸಲೇಮ"ನ್ನು ಅಕ್ಷರಶಃ ಎಂದು ಅರ್ಥೈಸಿಕೊಳ್ಳಬೇಕಾದಲ್ಲಿ, 21:16ರಲ್ಲಿನ ಅಳತೆಗಳನ್ನು ಸಹ ಅಕ್ಷರಶಃವಾಗಿ ಅರ್ಥೈಸಿಕೊಳ್ಳಬೇಕಷ್ಟೆ. ಹೇಗೂ, ಫಿಲಿಷ್ಟಿಯ ದೇಶವು ಕೇವಲ 150 ಮೈಲಿಗಳಷ್ಟು ಉದ್ದ ಹಾಗೂ 70 ಮೈಲಿ ಅಗಲ ವ್ಯಾಪ್ತಿಯುಳ್ಳದ್ದಾಗಿದೆ ಅಷ್ಟೆ; ಅದರೊಳಗೆ 1,500 ಚದರ ಮೈಲಿಗಳಷ್ಟು ವಿಸ್ತೀರ್ಣದ ಜಾಗಕ್ಕೆ ಅವಕಾಶವೇ ಇರುವದಿಲ್ಲ.

ಕೆಲವು ವ್ಯಾಖ್ಯಾನಕಾರರು 20:11-15 ವಾಕ್ಯಭಾಗವು ದೇವರ ತಾತ್ಕಾಲಿಕವಾದ ನ್ಯಾಯತೀರಿಸುವಿಕೆಗಳನ್ನು, ವಿಶೇಷವಾಗಿ ರೋಮಿನ ವಿರುದ್ಧ ದೇವರ ನ್ಯಾಯತೀರ್ಪನ್ನು ಸೂಚಿಸುತ್ತದೆಂದು ನಂಬುತ್ತಾರೆಂದು ಈ ಮುಂಚೆ ಪ್ರಸ್ತಾಪಿಸಲಾಗಿರುತ್ತದೆ. ಅದೇ ರೀತಿಯಲ್ಲಿ, 21:1-22:5ರ ವಾಕ್ಯಭಾಗವು ಭೂಮಿಯ ಮೇಲೆ ಸಭೆಯ, ವಿಶೇಷವಾಗಿ ರೋಮನ್ ಹಿಂಸೆಯು ಅಂತ್ಯಗೊಂಡ ಬಳಿಕ ಜಯಶಾಲಿಯಾಗಿರುವಂಥ ಸಭೆಯ ಚಿತ್ರಣವಾಗಿದೆ ಎಂದು ಕೆಲವರು ಮನವರಿಕೆ ಹೊಂದಿರುತ್ತಾರೆ. ಪ್ರಕಟನೆ 21:1-22:5ರ ವಾಕ್ಯಭಾಗವು ಭೂಮಿಯ ಮೇಲೆ ಆದರ್ಶವಾದ ಸಣೆಯನ್ನು ಬಣ್ಣಿಸಬಹುದಾಗಿದೆ, ಆದರೆ ವಾಕ್ಯಭಾಗವು ಆತ್ಮಗಳ ನಿವಾಸವನ್ನು, ಅಂದರೆ ಪರಲೋಕವನ್ನು ಕುರಿತು ಹೇಳುತ್ತಿರುವ ಸಾಧ್ಯತೆಯು ಅಧಿಕವಾಗಿದೆ. Daniel Russellನು ಹೀಗೆ ಬರೆದನು, "ಎಲ್ಲಾ ಯುಗಗಳಲ್ಲಿಯೂ, ಸಭೆಯು ಈ ವಾಕ್ಯಭಾಗದಲ್ಲಿ ಪರಲೋಕದ ಒಂದು ಬಣ್ಣನೆಯನ್ನು ಕಂಡಿರುತ್ತದೆ."[2] Harold Hazelipನು ಅದರೊಂದಿಗೆ ಸಹಮತವನ್ನು ವ್ಯಕ್ತಪಡಿಸುತ್ತಾನೆ: "ಪ್ರಕಟನೆ ಪುಸ್ತಕದ ಈ ಮುಕ್ತಾಯ ಭಾಗದಲ್ಲಿರುವ ಪ್ರಮುಖ ಚರ್ಚೆಯಾಂಶವು ವಿಮೋಚಿಸಲ್ಪಟ್ಟವರ ಅಂತ್ಯಾವಸ್ಥೆಯೇ."[3]

20:11-15ರ ವಾಕ್ಯಭಾಗವು ಅಂತಿಮ ನ್ಯಾಯತೀರ್ಪು ಕುರಿತಾಗಿರುತ್ತದೆಂಬುದಕ್ಕೆ ಈ ಮುಂಚೆ ಕೊಡಲಾಗಿರುವ ಕಾರಣಗಳು ಸರಿಯಾಗಿರುವದಾದರೆ (20:11-15ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), 21 ಮತ್ತು 22 ಅಧ್ಯಾಯಗಳು ಖಂಡಿತವಾಗಿಯೂ ಪರಲೋಕವನ್ನೇ ಬಣ್ಣಿಸತಕ್ಕದ್ದಾಗಿದೆ. ನಾವು "ಈಗಿನ ಕ್ರಮವು ಗತಿಸಿ ಹೋಗಿ, ಮಾನವರಿಗೆ ಅಂತಿಮ ನ್ಯಾಯತೀರ್ಪಾಗುವದನ್ನು ಮತ್ತು ದುಷ್ಟರಿಗೆ ದಂಡನೆಯಾಗುವದನ್ನು" ನೋಡಿರುವಾದರೆ, "ಮುಂದಿನ ಕ್ರಮದಲ್ಲಿ ಬರಲಿರುವ ದೃಶ್ಯವು ಕಾಲವನ್ನು ಮೀರಿ ಸಭೆಯು ದೇವರೊಂದಿಗೆ ವಿಶ್ರಾಂತಿಯಲ್ಲಿ ಸೇರುವದಾಗಿ ಅದು ಅಂತಿಮ ಮಹಿಮೆಯಲ್ಲಿರುವದರ ಚಿತ್ರಣವಾಗಿರುವದು ತಾರ್ಕಿಕವಾಗಿರುತ್ತದಷ್ಟೆ."[4] 21:1-22:5ರ ವಾಕ್ಯಭಾಗವು ಪರಲೋಕದ ಕುರಿತಾಗಿ ಮಾತಾಡುತ್ತದೆಂಬುದನ್ನು ತೋರಿಸುವದಕ್ಕೆ ಇನ್ನಷ್ಟು ಕಾರಣಗಳನ್ನು ಕೊಡಬಹುದಾಗಿದೆ:

1. ಇಲ್ಲಿ ಬಳಸಲಾಗಿರುವ ಭಾಷೆಯು ಪರಲೋಕದ ಕುರಿತು ಬೈಬಲಿನ ಇತರ ವಾಕ್ಯಭಾಗಗಳಿಂದ ತಿಳಿದುಕೊಂಡಿರುವದರೊಂದಿಗೆ ಸಾಮಂಜಸ್ಯತೆಯಲ್ಲಿರುತ್ತದೆ.

2. ದೇವರು "ಕಣ್ಣೀರನ್ನೆಲ್ಲಾ ಒರೆಸಿಬಿಡುವನು" ಎಂಬ ವಾಗ್ದಾನವು (21:4) ಈಗಾಗಲೇ ಮರಣಿಸಿರುವವರಿಗೆ 7:17ರಲ್ಲಿ ನೀಡಲಾಗಿದ್ದ ಅದೇ ವಾಗ್ದಾನವಾಗಿರುತ್ತದೆ. ಈ ವಾಗ್ದಾನವು ಸ್ಪಷ್ಟವಾಗಿ ಮುಂದಿನ ಜೀವಿತಕ್ಕಾಗಿಯೇ ಹೊರತು, ಈ ಜೀವಿತಕ್ಕೆ ಅನ್ವಯಿಸುವದಿಲ್ಲ. ಈ

ಲೋಕದಲ್ಲಿ, ದೇವರು ನಮ್ಮ ದುಃಖಗಳಲ್ಲಿ ನಮ್ಮನ್ನು ಸಂತೈಸುತ್ತಾನೆ; ಮುಂದಿನ ಜೀವಿತದಲ್ಲಿ ಆತನು ನಮ್ಮ ದುಃಖಗಳನ್ನು *ತೆಗೆದು ಹಾಕುವನು.*

3. "ಜಯಹೊಂದುವವರ" ಬಾಧ್ಯತೆಯು (21:7) ದುಷ್ಟರಿಗಾಗುವ ಗತಿಯ ವಿರುದ್ಧ ಹೋಲಿಕೆ ಮಾಡಲ್ಪಟ್ಟಿದೆ (21:8). ನೀತಿವಂತರ ಆಶೀರ್ವಾದಗಳು "ಯುಗಯುಗಾಂತರಗಳಲ್ಲಿಯೂ" ಇರುತ್ತವೆ (22:5), ಹಾಗೆಯೇ ಅನೀತಿವಂತರಿಗಾಗುವ ಶಾಪವು ಸಹ "ಯುಗಯುಗಾಂತರಗಳಲ್ಲಿಯೂ" ಇರುವದಾಗಿದೆ (20:10; ನೋಡಿರಿ 20:15; 21:8).

4. ವಾಕ್ಯಭಾಗವು ಪೇತ್ರನು "ನೂತನಾಕಾಶಮಂಡಲವನ್ನೂ ನೂತನಭೂಮಂಡಲವನ್ನೂ" ಕುರಿತು ಮಾಡುವ ಬೋಧನೆಯೊಂದಿಗೆ ನಿಕಟವಾಗಿ ಸಂಬಂಧ ಹೊಂದಿದೆ. Homer Haileyನು ಅಭಿಪ್ರಾಯ ಪಡುವದೇನೆಂದರೆ,

> ನೂತನ ಆಕಾಶಮಂಡಲ ಹಾಗೂ ನೂತನ ಭೂಮಂಡಲ ಕುರಿತಾಗಿ ಪೇತ್ರನ ಬರವಣಿಗೆಯನ್ನು (2 ಪೇತ್ರ 3) ಜಾಗರೂಕತೆಯಿಂದ ಅಧ್ಯಯನ ಮಾಡುವಾಗ ಯೋಹಾನನು ಮಾಡುವ ಬಣ್ಣನೆಯೊಂದಿಗೆ ಗಮನಸೆಳೆಯುವಷ್ಟು ಸಮಾನಾರ್ಥ ಹೊಂದಿರುವದು ಪ್ರಕಟಗೊಳ್ಳುತ್ತದೆ. ಇವರಿಬ್ಬರೂ ನ್ಯಾಯತೀರ್ಪು ಹಾಗೂ ಭಕ್ತಿಹೀನರ ನಾಶನದ ಕುರಿತು (2 ಪೇತ್ರ 3:7; ಪ್ರಕಟನೆ 20:13), ಮತ್ತು ನೂತನಾಕಾಶಮಂಡಲ ಹಾಗೂ ಭೂಮಂಡಲಗಳು (2 ಪೇತ್ರ 3:13; ಪ್ರಕಟನೆ 21:1) ಬರುವದಕ್ಕೆ ಮುನ್ನ, ಈಗಿನ ಆಕಾಶಮಂಡಲ ಹಾಗೂ ಭೂಮಂಡಲಗಳು (2 ಪೇತ್ರ 3:10; ಪ್ರಕಟನೆ 20:11) ಗತಿಸಿಹೋಗುವದರ ಕುರಿತು ತಿಳಿಸುತ್ತಾರೆ. ಪೇತ್ರ ಹಾಗೂ ಯೋಹಾನ ಇಬ್ಬರೂ ಅಂತಿಮ ನ್ಯಾಯತೀರ್ಪು ಮತ್ತು ಅನಂತರದಲ್ಲಿ ಸಂಭವಿಸುವಂಥದ್ದನ್ನು ಕುರಿತು ಬರೆಯುತ್ತಿದ್ದಾರೆಯೇ ಹೊರತು, ಇಂದಿನ ಸಭೆಯು ಹಿಂಸೆಯು ಮೂಲಕವಾಗಿ ಪರಿಶೋಧಿಸಲ್ಪಟ್ಟು, ಶುದ್ಧೀಕರಿಸಲ್ಪಡು ಕುರಿತಲ್ಲ ... ಪೇತ್ರ ಹಾಗೂ ಯೋಹಾನರು ... ನ್ಯಾಯತೀರ್ಪನ್ನು ದಾಟಿ ಇರುವ ಅಂತಿಮ ಹಾಗೂ ನಿತ್ಯವಾದ ಕ್ರಮದ ಕುರಿತು ಬರೆದರು.[5]

5. ಪ್ರಕಟನೆ ಪುಸ್ತಕದ ಕಡೆಯ ಅಧ್ಯಾಯಗಳು "ಹೆಚ್ಚುಕಡಿಮೆ ಒಂದೇ" ಆಗಿದ್ದು, ಪುಸ್ತಕವು ಒಂದು ವಿಧದಲ್ಲಿ ಒಂದು ಪ್ರತಿಕಾಷ್ಠೆಯೊಂದಿಗೆ ಮುಕ್ತಾಯಗೊಳ್ಳುತ್ತದೆ. ಪ್ರಕಟನೆ 20 ಮತ್ತು 21 ಅಧ್ಯಾಯಗಳು ಪ್ರಕಟನೆ ಪುಸ್ತಕಕ್ಕೆ, ಇಡೀ ಬೈಬಲಿಗಾಗಿ ಸಹ ಒಂದು ಪರಾಕಾಷ್ಠೆಯನ್ನು ಒದಗಿಸುತ್ತವೆಂದು ಬಹುಪಾಲು ಲೇಖಕರು ಒಪ್ಪಿಕೊಳ್ಳುತ್ತಾರೆ. Albert Baldingerನು ತನ್ನ ವಾಚಕರಿಗೆ ಪ್ರಕಟನೆ ಪುಸ್ತಕದ ಇಪ್ಪತ್ತೊಂದನೆಯ ಅಧ್ಯಾಯವನ್ನು ಕಿತ್ತು ಹಾಕುವದಾದರೆ ಅವರಿಗೆ ಹೇಗೆ ಅನ್ನಿಸುತ್ತದೆ ಎಂದು ಕೇಳಿದನು: "ನೀವು ನಿಮ್ಮ ಉಳಿದ ಜೀವಿತ ಕಾಲವೆಲ್ಲಾ 'ಕಳೆದು ಹೋದ ಸ್ಪಂದನ'ವೊಂದರಿಂದ ಕಾಡಲ್ಪಡುವವರಾಗಿ ಕಳೆಯುವಿರಿ ಎಂದು ಸಂಶಯಿಸುತ್ತೇನೆ. ಅದೊಂದು ರೀತಿಯಲ್ಲಿ Handelನ 'Messiah' ದಿಂದ 'ಹಲ್ಲೆಲೂಯಾ' ಪಲ್ಲವಿಯನ್ನು ... ತೆಗೆದು ಹಾಕಿದಂತಾಗುವದು."[6]

ಪ್ರಕಟನೆ 21-22 ಅಧ್ಯಾಯಗಳು ಭೂಮಿಯ ಮೇಲಿನ ಸಭೆಯನ್ನು ಚಿತ್ರಿಸುತ್ತವೆಂದು ನಂಬುವವರು ವಾಕ್ಯಭಾಗದಲ್ಲಿನ ಅನೇಕ ಮಾತುಗಳು ತಮ್ಮ ತದ್ರೂಪಗಳನ್ನು ಮೆಸ್ಸೀಯನ ರಾಜ್ಯ/ಸಭೆಯ ಸ್ಥಾಪನೆಯ ಕುರಿತಾದ ಹಳೆಯ ಒಡಂಬಡಿಕೆಯ ಪ್ರವಾದನೆಗಳಲ್ಲಿ ಕಂಡುಕೊಳ್ಳುತ್ತವೆ. "ಹೊಸ ಯೆರೂಸಲೇಮ್"ಗೆ ಸಂಬಂಧಿಸಿದಂತೆ ಬಳಸಲ್ಪಟ್ಟಿರುವ ಪದಗಳೊಳಗೆ ಅನೇಕ ಪದಗಳು ಬೇರೆ ಕಡೆಗಳಲ್ಲಿ ಸಭೆಗೆ ಸಂಬಂಧಿಸಿದಂತೆ ಬಳಸಲ್ಪಟ್ಟಿವೆ ಎಂಬ ವಾಸ್ತವಾಂಶದ ಕಡೆಗೆ ಗಮನವನ್ನು ಸೆಳೆಯುತ್ತಾರೆ. ಈ ಸಮರ್ಥನೆಗಳು ಸತ್ಯವೇ

ಆಗಿದ್ದಾವಾದರೂ, ನಾವು ಸಭೆ ಮತ್ತು ಪರಲೋಕಗಳ ನಡುವೆ ಇರುವ ನಿಕಟವಾದ, ಬೇರ್ಪಡಿಸಲಾಗದಂತೆ ಸಹ ಇರುವ ಸಂಬಂಧದ ಕಡೆಗೆ ಗಮನವನ್ನು ಕೊಡಬೇಕು.

ಸಭೆ ಮತ್ತು ಪರಲೋಕಗಳು ಒಂದೇ ವಾಸ್ತವಿಕತೆಯ ಎರಡು ಘಟಕಗಳಾಗಿವೆ. ಉದಾಹರಣೆಗೆ, ಎರಡೂ "ರಾಜ್ಯ" ಎಂದು ಕರೆಯಲ್ಪಟ್ಟಿವೆ. "ರಾಜ್ಯ" ಎಂಬ ಪದವು ದೇವರು ಆಳ್ವಿಕೆ ಮಾಡುವಂತಹ ಮಂಡಲವನ್ನು ಸೂಚಿಸುತ್ತವೆ (20:4-6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ಪ್ರಸ್ತುತ ಯುಗದಲ್ಲಿ, ಇದರ ಭೂಲೋಕದ ವ್ಯಕ್ತಪಡಿಸುವಿಕೆಯನ್ನು ಸಭೆ ಎಂದು ಕರೆಯಲಾಗಿರುತ್ತದೆ (ಮತ್ತಾಯ 16:18, 19), ಅದೇ ವೇಳೆಯಲ್ಲಿ ಪರಲೋಕದ ಅಂಶವು ಪರಲೋಕ ಎಂದಷ್ಟೇ ಕರೆಯಲ್ಪಟ್ಟಿದೆ (ಮತ್ತಾಯ 6:9, 10, 20). ಸಭೆಯು ರಾಜ್ಯವಾಗಿರುತ್ತದೆ ಎಂಬ ವಾಸ್ತವಾಂಶವು ಪ್ರಕಟನೆ ಪುಸ್ತಕದ ಅಧ್ಯಯನದ ವೇಳೆ ಹಲವಾರು ಸಾರಿ ಚರ್ಚಿಸಲ್ಪಟ್ಟಿರುತ್ತದೆ (1:9; 5:10; 11:15, 17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ರಾಜ್ಯದ ಕುರಿತಾದ ಭೂಲೋಕದ ಹಾಗೂ ಪರಲೋಕದ ಅಂಶಗಳೆರಡನ್ನೂ ತಿಳಿಸುವ ವಾಕ್ಯಾಭಾಗವು ಇಬ್ರಿಯರಿಗೆ 12:22-24 ಆಗಿರುತ್ತದೆ. ಹೀಗೆ ಹೊಸ ಒಡಂಬಡಿಕೆಯ ಲೇಖಕರು ರಾಜ್ಯದಲ್ಲಿ *ಇರುವದರ* ಕುರಿತು, ಅಂದರೆ ಸಭೆಯಲ್ಲಿರುವದನ್ನು ಉಲ್ಲೇಖಿಸಲು ಶಕ್ತರಾಗಿದ್ದರು (ನೋಡಿರಿ ಕೊಲೊಸ್ಸೆ 1:13; ಇಬ್ರಿಯ 12:28 ಪ್ರಕಟನೆ 1:6, 9; 5:10), ಅದೇ ವೇಳೆಯಲ್ಲಿ ಅವರು ಒಂದು ದಿನ ರಾಜ್ಯದಲ್ಲಿ, ಅಂದರೆ ಪರಲೋಕದಲ್ಲಿ *ಸೇರುವದನ್ನು* ಎದುರು ನೋಡುತ್ತಿದ್ದರು (ನೋಡಿರಿ ಅಪೊಸ್ತಲರ ಕೃತ್ಯಗಳು 14:22; 2 ತಿಮೊಥೆ 4:18; ಯಾಕೋಬ 2:5; 2 ಪೇತ್ರ 1:11). ನಾವು "ದೇವರ ರಾಜ್ಯ" ಅಥವಾ "ಪರಲೋಕ ರಾಜ್ಯ" ಎಂಬ ಪದಗಳನ್ನು ಹೊಸ ಒಡಂಬಡಿಕೆಯಲ್ಲಿ ಕಾಣುವಾಗ, ಆ ಪದಗಳು ಸಭೆಯನ್ನು ಸೂಚಿಸುತ್ತವೋ ಅಥವಾ ಪರಲೋಕವನ್ನೋ ಎಂದು ಹೇಗೆ ತಿಳಿಯಬಲ್ಲೆವು? ಅರ್ಥವನ್ನು *ಸನ್ನಿವೇಶದ* ಅನುಗುಣವಾಗಿ ನಿರ್ಧರಿಸತಕ್ಕದ್ದು. ಅಲ್ಲಿ ಭೂಲೋಕದ ರಾಜ್ಯ (ಸಭೆ) ಸೂಚಿಸಿ ಹೇಳಲಾಗುತ್ತಿದೆಯೋ ಅಥವಾ ಪರಲೋಕದ ರಾಜ್ಯ (ಪರಲೋಕ) ಕುರಿತು ಹೇಳಲಾಗುತ್ತಿದೆಯೋ ಎಂದು ಹೇಳುವದು ಕೆಲವು ಸಾರಿ ಕಷ್ಟಕರವಾಗಿರುತ್ತದೆ, ಈ ಕಠಿಣತೆಯು ಎರಡರ ನಡುವಿನ ನಿಕಟ ಸಂಬಂಧಕ್ಕೆ ಇನ್ನೊಂದು ಸೂಚನೆಯಾಗಿರುತ್ತದೆ.

ಸಭೆ ಹಾಗೂ ಪರಲೋಕದ ನಡುವೆ ನಿಕಟವಾದ ಸಂಬಂಧವಿರುವದರಿಂದ, ಈಗ ಸಭೆಯ ಸದಸ್ಯರಿಂದ (ಕ್ರೈಸ್ತರು) ಅನುಭವಿಸಲ್ಪಡುತ್ತಿರುವ ಆಶೀರ್ವಾದಗಳನ್ನು ಪರಲೋಕದಲ್ಲಿನ ಸಂತೋಷಗಳಿಗೆ ಮುನ್‌ರುಚಿಗಳಾಗಿರುತ್ತವೆ ಎಂಬುದಾಗಿ ಯೋಚಿಸಬಹುದು. ಈ ದೃಷ್ಟಾಂತವನ್ನು ಆಲೋಚಿಸಿರಿ: ದೇವರು ತನ್ನ ಪವಿತ್ರಾತ್ಮನನ್ನು ಸಭೆಯಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಪ್ರತಿಯೊಬ್ಬರಿಗೂ ಅನುಗ್ರಹಿಸುತ್ತಾನೆ (ಅಪೊಸ್ತಲರ ಕೃತ್ಯಗಳು 2:38, 41, 47). ಈ ವರದ ವಿಷಯದಲ್ಲಿ, ಪೌಲನು ಹೀಗೆ ಬರೆದನು, "... ನೀವು ಸಹ ವಾಗ್ದಾನಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ ಪವಿತ್ರಾತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ (ಎಫೆಸ 1:13, 14). NIVಯಲ್ಲಿ "ನೀವು ಆತನಲ್ಲಿ ಒಂದು ಮುದ್ರೆಯೊಂದಿಗೆ ಗುರುತಿಸಲ್ಪಟ್ಟಿರುವಿರಿ, ಆ ಮುದ್ರೆಯು ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೇ, ಆತನನ್ನು ನಮ್ಮ ಬಾಧ್ಯತೆಗೆ ನಿಶ್ಚಯವಾದ ಠೇವಣಿಯಾಗಿದ್ದಾನೆ" ಎಂದು ಇರುತ್ತದೆ. ಒಂದು ಠೇವಣಿಯು ಮುಂಗಡ ಹಣವಾಗಿರುತ್ತದೆ; ನಿಯಮದ ಪ್ರಕಾರ, ಅದು ಉಳಿದ ಹಣದಲ್ಲಿರುವಂಥ ಅದೇ ಸಾಮಗ್ರಿಯನ್ನೇ ಒಳಗೊಂಡಿರುತ್ತದೆ. ಈಗ ದೇವರಾತ್ಮನ ಪ್ರಸನ್ನತೆಯನ್ನು ಆನಂದಿಸುವದು ನಮಗಿರುವ ನಿತ್ಯವಾದ ಬಾಧ್ಯತೆಗೆ ಒಂದು "ಖಾತರಿ" ಆಗಿರುತ್ತದೆ, ಆದರೆ ಆ ಬಾಧ್ಯತೆಗೆ - ಈಗ ನಾವು ಅನಂದಿಸುತ್ತಿರುವದಕ್ಕಿಂತಲೂ ಇನ್ನಷ್ಟು

ನಿಕಟವಾದ ಸಂಬಂಧವನ್ನು ಕ್ರೈಸ್ತರು ದೇವರೊಂದಿಗೆ ಆನಂದಿಸುವ ಆ ಸಮಯದ - ಒಂದು *ಮುನ್‌ರುಚಿ* ಸಹ ಆಗಿರುತ್ತದೆ (ಪ್ರಕಟನೆ 21:3).

ಆದದರಿಂದ, ಹಳೆಯ ಒಡಂಬಡಿಕೆಯ ಪ್ರವಾದಿಗಳು ಬರಲಿರುವ ಮೆಸ್ಸೀಯನ ರಾಜ್ಯದ ಕುರಿತಾಗಿ ಮಾಡುವದಕ್ಕೆ ಪ್ರಕಟನೆ 21-22 ಅಧ್ಯಾಯಗಳಲ್ಲಿರುವ ರೀತಿಯಲ್ಲಿಯೇ ಪದಗಳನ್ನು ಬಳಕೆ ಮಾಡಿದರೆಂಬುದನ್ನು ಆಶ್ಚರ್ಯವೇನೂ ಇಲ್ಲ. ಅಲ್ಲದೆ ಸಭೆಯಲ್ಲಿನ ಆಶೀರ್ವಾದಗಳ ಕುರಿತು ಮಾತಾಡುವದಕ್ಕೆ ಬಳಸಲ್ಪಟ್ಟಿರುವ ಪದಗಳೇ ಪರಲೋಕದಲ್ಲಿನ ಆಶೀರ್ವಾದಗಳ ಕುರಿತು ಮಾತಾಡಲು ಬಳಸಲ್ಪಟ್ಟಿವೆ ಎಂಬುದು ಸಹ ಆಶ್ಚರ್ಯವಲ್ಲ. ಸಭೆಯು ಜನರನ್ನು ದೇವರ ಬಳಿಗೆ ಪುನಃ ಕರೆದುಕೊಂಡು ಬರುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟಿತು, ಹೀಗೆ ಭೂಲೋಕದ ಪರದೈಸಿನಲ್ಲಿ ಕಳೆದು ಹೋಗಿರುವದನ್ನು (ಆದಿಕಾಂಡ 2; 3) ಪರಲೋಕದ ಪರದೈಸಿನಲ್ಲಿ ಪುನಃ ಸ್ಥಾಪಿಸುವಂತಾಗುವದು (ಪ್ರಕಟನೆ 22:1, 2).

21:1-22:5ರ ಚರ್ಚೆಯುದ್ದಕ್ಕೂ ವಾಕ್ಯಭಾಗವು ಪರಲೋಕದ ಕುರಿತಾಗಿ ಮಾತಾಡುತ್ತದೆಂಬುದು ಲೇಖಕನ ನಿಲುವು ಆಗಿರುತ್ತದೆ. ಈ ಅರ್ಥೈಸುವ ದಾರಿಯನ್ನು ಅನುಸರಿಸುವದರಿಂದ ಸಭೆಯನ್ನು ಚರ್ಚೆಯಲ್ಲಿ ನಿರ್ಲಕ್ಷ್ಯಿಸಲಾಗುವದೆಂದರ್ಥವಲ್ಲ. ನಾವು ಮಹಿಮೆಗೊಂಡಿರುವ ಸಭೆ, ದೇವರ ಜನರು ನಿತ್ಯವಾದ ಆಶೀರ್ವಾದಗಳಲ್ಲಿ ಆನಂದಿಸುತ್ತಿರುವದನ್ನು ಕಾಣುವೆವು. ಈ ವಾಕ್ಯಭಾಗದಲ್ಲಿ, *ಜನರು* (ಸಭೆ) ಮತ್ತು *ಸ್ಥಳ* (ಪರಲೋಕ) ನಡುವೆ ವ್ಯತ್ಯಾಸವನ್ನು ಗುರುತಿಸುವದು ಅನೇಕ ಸಾರಿ ಕಷ್ಟಕರವಾಗಿರುತ್ತದೆ.

## ಮನುಷ್ಯರ ಮಧ್ಯದಲ್ಲಿ ದೇವರ ನಿವಾಸ (21:1-4)

**[1]ತರುವಾಯ ನೂತನಾಕಾಶಮಂಡಲವನ್ನೂ ನೂತನಭೂಮಂಡಲವನ್ನೂ ಕಂಡೆನು. ಮೊದಲಿದ್ದ ಆಕಾಶಮಂಡಲವೂ ಮೊದಲಿದ್ದ ಭೂಮಂಡಲವೂ ಇಲ್ಲದೆ ಹೋದವು; ಇನ್ನು ಸಮುದ್ರವೂ ಇಲ್ಲ. [2]ಇದಲ್ಲದೆ ಪರಿಶುದ್ಧ ಪಟ್ಟಣವಾದ ಹೊಸ ಯೆರೂಸಲೇಮು ಪರಲೋಕದಿಂದ ದೇವರ ಬಳಿಯಿಂದ ಇಳಿದುಬರುವದನ್ನು ಕಂಡೆನು; ಅದು ತನ್ನ ಗಂಡನಿಗೋಸ್ಕರ ಅಲಂಕೃತಳಾದ ಮದಲಗಿತ್ತಿಯಂತೆ ಶೃಂಗರಿಸಲ್ಪಟ್ಟಿತ್ತು. [3]ಇದಲ್ಲದೆ ಸಿಂಹಾಸನದೊಳಗಿಂದ ಬಂದ ಮಹಾ ಶಬ್ದವು ನನಗೆ ಕೇಳಿಸಿತು. ಅದು - ಇಗೋ, ದೇವರ ನಿವಾಸವು ಮನುಷ್ಯರಲ್ಲಿ ಅದೆ; ಆತನು ಅವರೊಡನೆ ವಾಸಮಾಡುವನು, ಅವರು ಆತನಿಗೆ ಪ್ರಜೆಗಳಾಗಿರುವರು; ದೇವರು ತಾನೇ ಅವರ ಸಂಗಡ ಇರುವನು, [4]ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು. ಇನ್ನು ಮರಣವಿರುವದಿಲ್ಲ, ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ; ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು ಎಂದು ಹೇಳಿತು.**

ಮೊದಲ ಎಂಟು ವಚನಗಳಲ್ಲಿ ಪರಲೋಕದ *ಹೊಸತನದ* ಮೇಲೆ ಒತ್ತು ಕೊಡಲಾಗಿರುತ್ತದೆ. ಪವಿತ್ರಾತ್ಮನಿಂದ ಪ್ರೇರಿತನಾಗಿ, ಯೋಹಾನನು ಪರಲೋಕ ಎಷ್ಟೊಂದು ಅದ್ಭುತವಾಗಿದೆ ಎಂಬುದನ್ನು ಒತ್ತಿ ಹೇಳುವದಕ್ಕೆ ಮಾನವ ಭಾಷೆಯ ಮಿತಿಗಳನ್ನು ದಾಟಿ ಹೋಗುತ್ತಾನೆ.

ವಚನ **1.** ಅಪೊಸ್ತಲನು ಹೀಗೆ ಆರಂಭಿಸುತ್ತಾನೆ, **ತರುವಾಯ ನೂತನಾಕಾಶಮಂಡಲವನ್ನೂ ನೂತನಭೂಮಂಡಲವನ್ನೂ ಕಂಡೆನು. ಮೊದಲಿದ್ದ ಆಕಾಶಮಂಡಲವೂ ಮೊದಲಿದ್ದ ಭೂಮಂಡಲವೂ ಇಲ್ಲದೆ ಹೋದವು.** ಹಿಂದಿನ ಅಧ್ಯಾಯದಲ್ಲಿ, ದೇವರ ಎದುರಿನಿಂತ "ಭೂಮ್ಯಾಕಾಶಗಳು ಓಡಿಹೋದವು" ಮತ್ತು "ಇನ್ನು ಕಾಣಿಸದ

ಹಾಗಾದವು" (20:11) ಎಂದು ನೋಡಿದೆವು. ಇದರ ಒಂದು ಉದ್ದೇಶವು "ನೂತನಾಕಾಶಮಂಡಲ" ಹಾಗೂ "ನೂತನಭೂಮಂಡಲ"ಗಳಿಗಾಗಿ ದಾರಿಯನ್ನು ಸಿದ್ಧಮಾಡುವದೇ ಆಗಿತ್ತು. **ಮೊದಲಿದ್ದ ಆಕಾಶಮಂಡಲ** ಎಂಬುದು ದೇವರ ನಿವಾಸವನ್ನು ಸೂಚಿಸುವದಿಲ್ಲ. ಆ ಆಕಾಶವು ಹೊಸದಕ್ಕೆ ದಾರಿ ಮಾಡುವದಕ್ಕಾಗಿ ಗತಿಸಿ ಹೋಗಲಿಲ್ಲ. ಬದಲಾಗಿ, "ಮೊದಲಿದ್ದ ಆಕಾಶಮಂಡಲವೂ ಮೊದಲಿದ್ದ ಭೂಮಂಡಲವೂ" ಎಂಬ ಮಾತುಗಳು ಶಾರೀರಿಕ ವಿಶ್ವವನ್ನು ಸೂಚಿಸುತ್ತವೆ (20:11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). "ಮೊದಲಿದ್ದ ಆಕಾಶಮಂಡಲವೂ ಮೊದಲಿದ್ದ ಭೂಮಂಡಲವೂ" ಎಂಬ ಪರಿಭಾಷೆಯನ್ನು ಹೊಸದು, ಆತ್ಮೀಕವಾದ ಸೃಷ್ಟಿಯನ್ನು ಹಳೆಯದಾದ, ಶಾರೀರಿಕ ಸೃಷ್ಟಿಯೊಂದಿಗೆ ವಿರುದ್ಧ ಹೋಲಿಕೆ ಮಾಡುವದಕ್ಕಾಗಿ ಬಳಸಲ್ಪಟ್ಟಿರುತ್ತದೆ.

**ನೂತನಭೂಮಂಡಲ** ಎಂಬ ಪದಗುಚ್ಛದ ಸೇರ್ಪಡೆಯು ಕೆಲವು ಲೇಖಕರಲ್ಲಿ ಗೊಂದಲವನ್ನುಂಟು ಮಾಡುತ್ತದೆ. ಅನೇಕರು ಒಂದು ನವೀಕರಿಸಲ್ಪಟ್ಟ ಭೂಮಿಯ ಕುರಿತಾದ ವಿಸ್ತರವಾದ ಊಹೆಗಳನ್ನು ಸೃಷ್ಟಿಸಿಕೊಂಡು ಹೇಳುತ್ತಾರೆ. ಹೇಗೂ, ಶಾರೀರಿಕ ವಿಶ್ವವು ನಾಶಗೊಳ್ಳುವದು ಎಂಬುದಾಗಿ ಬೈಬಲ್ ಸ್ಪಷ್ಟವಾಗಿ ಹೇಳುತ್ತದೆ.[7] ಯೇಸು ಬಹು ಸ್ಪಷ್ಟವಾಗಿ ಹೇಳಿದ್ದೇನೆಂದರೆ, "ಭೂಮ್ಯಾಕಾಶಗಳು ಅಳಿದುಹೋಗುವವು" (ಮತ್ತಾಯ 24:35; ನೋಡಿರಿ ಮತ್ತಾಯ 5:18). ಇಬ್ರಿಯರಿಗೆ ಪತ್ರಿಕೆಯ ಲೇಖಕನು ಸೃಷ್ಟಿಸಲ್ಪಟ್ಟಿರುವಂಥವುಗಳು ತೆಗೆದು ಹಾಕಲ್ಪಡುವವು ಎಂದು ಹೇಳಿದನು (ಇಬ್ರಿಯ 12:27). ಪೇತ್ರನು "ಆಕಾಶಮಂಡಲವು ಬೆಂಕಿ ಹತ್ತಿ ಲಯವಾಗಿ ಹೋಗುವದು, ಸೂರ್ಯಚಂದ್ರ ನಕ್ಷತ್ರಗಳು ಉರಿದು ಕರಗಿ ಹೋಗುವವು" ಎಂದು ಒತ್ತಿ ಹೇಳಿದನು (2 ಪೇತ್ರ 3:12).

ಹಾಗಾದರೆ, ಯೋಹಾನನು ಏಳೆ "ನೂತನಭೂಮಂಡಲ" ಎಂಬ ಪದವನ್ನ ಬಳಸಿದನು? ಮೊಟ್ಟಮೊದಲನೆಯದಾಗಿ, ಆತನು ಸೃಷ್ಟಿಯ ವ್ಯವಸ್ಥೆಯಲ್ಲಿ ನಾಟಕೀಯವಾದ *ಬದಲಾವಣೆ* ಆಗುವದನ್ನು ಬಣ್ಣಿಸುವದಕ್ಕೆ ಈ ಮುಂಚಿನ ಲೇಖಕರು ಬಳಸಿದ ಪದಗಳನ್ನು ಎರವಲು ಪಡೆಯುತ್ತಿದ್ದಾನೆ. ಯೆಶಾಯನು ತಾನು ನುಡಿದ ಮೆಸ್ಸೀಯನಿಗೆ ಸಂಬಂಧಿಸಿದ ಪ್ರವಾದನೆಗಳ ಭಾಗವಾಗಿ "ನೂತನಾಕಾಶಮಂಡಲವನ್ನೂ ನೂತನ ಭೂಮಂಡಲವನ್ನೂ" ಎಂಬ ಪದವನ್ನ ಬಳಸಿದನು (ಯೆಶಾಯ 65:17; ನೋಡಿರಿ 66:22). ಪೇತ್ರನು ಪರಲೋಕವನ್ನು ಎದುರುನೋಡುವದರಲ್ಲಿ ಇದೇ ಪರಿಭಾಷೆಯನ್ನು ಬಳಸಿದನು (2 ಪೇತ್ರ 3:13).

ಎರಡನೆಯದಾಗಿ, ಯೋಹಾನನು ಪ್ರೇರಿತನಾಗಿ, ವಾಚಕರಿಗೆ ಪರಿಚಿತವಾಗಿದ್ದ ಪದಗಳನ್ನ ಬಳಸುತ್ತಿದ್ದಾನೆ. ಮೋಶೆಯು ಮೊದಲನೆಯ, ಶಾರೀರಿಕ ಸೃಷ್ಟಿಯನ್ನು ಬಣ್ಣಿಸುವವನಾಗಿ "ದೇವರು ಆಕಾಶವನ್ನೂ ಭೂಮಿಯನ್ನೂ ಉಂಟು ಮಾಡಿದನು" (ಆದಿಕಾಂಡ 1:1). ಈಗ, ಯೋಹಾನನು ಎರಡನೆಯ, ಆತ್ಮೀಕ ಸೃಷ್ಟಿಯನ್ನು ಬಣ್ಣಿಸುತ್ತಾ ತಾನು "*ನೂತನಾ*ಕಾಶಮಂಡಲವನ್ನೂ ನೂತನಭೂಮಂಡಲವನ್ನೂ ಕಂಡೆನು" ಎಂದು ಹೇಳುತ್ತಾನೆ (ಒತ್ತಿ ಹೇಳಿದ್ದು ನನ್ನದು). ಮೋಶೆಯ ಪದಗುಚ್ಛ "ಆಕಾಶವನ್ನೂ ಭೂಮಿಯನ್ನೂ" ಎಂಬುದು *ಎಲ್ಲಾ* ಶಾರೀರಿಕವಾದ, ತಾತ್ಕಾಲಿಕವಾದ ಸೃಷ್ಟಿಯನ್ನು ಒಳಗೊಂಡಿದ್ದ ಪ್ರಕಾರವೇ (ನೋಡಿರಿ ಅಪೊಸ್ತಲರ ಕೃತ್ಯಗಳು 4:24; 17:24), ಯೋಹಾನನು ಬಳಸುವ "ನೂತನಾಕಾಶಮಂಡಲವನ್ನೂ ನೂತನಭೂಮಂಡಲವನ್ನೂ" ಎಂಬ ಪದಗುಚ್ಛವು ಸಹ *ಎಲ್ಲಾ* ಆತ್ಮೀಕ, ನಿತ್ಯವಾದ ಸೃಷ್ಟಿಯನ್ನೊಳಗೊಂಡಿತ್ತು.

"ನೂತನಾಕಾಶಮಂಡಲ" ಮತ್ತು "ನೂತನಭೂಮಂಡಲ" ಎಂಬ ಪದಗಳು, ಈಗಿನ ವಿಶ್ವವು ತೆಗೆದು ಹಾಕಲ್ಪಟ್ಟಾಗ್ಯೂ ಅವರು ಅಸ್ತಿತ್ವದಲ್ಲಿದ್ದು ಕ್ರಿಯೆ ಮಾಡುವದಕ್ಕೆ

ಶಕ್ತವಾಗುವಂಥ ಒಂದು ತಕ್ಕದಾದ ಪರಿಸರವು ಇರಲಿದೆ ಎಂಬ ಭರವಸವನ್ನ ಕ್ರೈಸ್ತರಿಗೆ ಕೊಡುತ್ತವೆ. ಪೌಲನ ಪ್ರಕಾರವಾಗಿ, ಕ್ರೈಸ್ತರು ಪುನರುತ್ಥಾನದ ಬಳಿಕ ದೇಹದಿಂದ ಬೇರ್ಪಟ್ಟ ಆತ್ಮಗಳಾಗಿರುವದಿಲ್ಲ, ಆದರೆ ಅವರಿಗೆ ದೇಹಗಳು - ಆತ್ಮೀಕ ದೇಹಗಳು, ನಿರ್ಲಯವಾ, ಮಹಿಮಕರವಾದ ದೇಹಗಳು, ಆದರೆ ಆಗಲೂ ದೇಹಗಳೇ ಆಗಿರುವವು - ಕೊಡಲ್ಪಡುವವು (1 ಕೊರಿಂಥ 15:35, 42-44; 2 ಕೊರಿಂಥ 4:16-5:4). ಮಾನವನ *ಆತ್ಮ* ಹಾಗೂ ಆತನಿಗೆ ಕೊಡಲ್ಪಡಲಿರುವ *ಅತ್ಮೀಕ ದೇಹ*ದ ನಡುವಿನ ವ್ಯತ್ಯಾಸವು ಏನೆಂಬುದು ತಿಳಿದು ಬಂದಿರುವದಿಲ್ಲ. ಶರೀರದಲ್ಲಿರುವವರಾಗಿ, ನಮಗೆ ಆತ್ಮೀಕ ಮಂಡಲವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಪೌಲನ ಪ್ರಕಾರವಾಗಿ, ಅಲ್ಲೊಂದು ವ್ಯತ್ಯಾಸವು *ಇರಲಿದೆ*. ಆ ಆತ್ಮೀಕ ದೇಹಗಳಿಗೆ ಜೀವಿಸಲು ಮತ್ತು ಕ್ರಿಯೆ ಮಾಡಲು ಒಂದು ಸ್ಥಳವಿರತಕ್ಕದ್ದು. ಶಾರೀರಿಕ ದೇಹಗಳಿಗೆ ಒಂದು ಶಾರೀರಿಕ ಆಕಾಶ ಮತ್ತು ಭೂಮಿ ಅಗತ್ಯವಿರುವ ಪ್ರಕಾರವೇ, ಆತ್ಮೀಕ ದೇಹಗಳಿಗೆ ಒಂದು ಆತ್ಮೀಕ "ಆಕಾಶ ಹಾಗೂ ಭೂಮಿ" ಅಗತ್ಯವಿರುತ್ತದೆ. ಯೇಸುವು ಹೀಗೆ ವಾಗ್ದಾನ ಮಾಡಿದನು, "ನಿಮಗೆ ಸ್ಥಳವನ್ನು *ಸಿದ್ಧಮಾಡುವದಕ್ಕೆ* ಹೋಗುತ್ತೇನಲ್ಲಾ" (ಯೋಹಾನ 14:2; ಒತ್ತಿ ಹೇಳಿದ್ದು ನನ್ನದು). ಪ್ರಕಟನೆ 21:1ರಲ್ಲಿ, ಪವಿತ್ರಾತ್ಮನು ಆ ಸಿದ್ಧಮಾಡಲ್ಪಟ್ಟಿರುವ ಸ್ಥಳವನ್ನು "ನೂತನಾಕಾಶಮಂಡಲ ಹಾಗೂ ನೂತನಭೂಮಂಡಲ" ಎಂದು ಕರೆಯುತ್ತಾನೆ.

ಹೇಗೂ, "ನೂತನಾಕಾಶಮಂಡಲ" ಹಾಗೂ "ನೂತನಭೂಮಂಡಲ" ಎಂಬ ಪದಗಳ ಬಗ್ಗೆ, ಅಥವಾ ಎರಡು ಮಂಡಲಗಳ ಕುರಿತಾದ ಬೇರೆ ಯಾವದೇ ಕಲ್ಪನಾತ್ಮಕ ಭಿನ್ನತೆಯ ಬಗ್ಗೆಯಾಗಲಿ ಅತಿಯಾಗಿ ಚಿಂತೆಯನ್ನು ಮಾಡಕೂಡದು. Leon Morrisನು ಅಭಿಪ್ರಾಯ ಪಟ್ಟದ್ದೇನೆಂದರೆ "ನೂತನ ಯೆರೂಸಲೇಮ್ ಒಳಿದು ಬಂದ ಬಳಿಕ ಆಕಾಶ ಮತ್ತು ಭೂಮಿಗಳ ನಡುವೆ ಯಾವದೇ ವ್ಯತ್ಯಾಸವು ಕಾಣಿಸುವದಿಲ್ಲ."[8] G. B. Cairdನು ಹೇಳಿದ್ದೇನೆಂದರೆ, ಆ ಹಂತದಲ್ಲಿ, "ಅವರೆಡರ ನಡುವಿನ ವ್ಯತ್ಯಾಸವು ಮರೆತು ಹೋಗಲ್ಪಟ್ಟಿರುವಂತೆ ಕಾಣಿಸುತ್ತದೆ."[9]

1ನೇ ವಚನದಲ್ಲಿರುವ ಇನ್ನೊಂದು ಒಗಟು ಎಂದರೆ ಅಂತ್ಯದಲ್ಲಿರುವ ಪದಗುಚ್ಛವೇ: **ಇನ್ನು ಸಮುದ್ರವೂ ಇಲ್ಲ.** ಈ ಪದಗಳು 20ನೇ ಅಧ್ಯಾಯವನ್ನು ಸೂಚಿಸಬಹುದಾಗಿದೆ. 20:13ರಲ್ಲಿ, "ಸಮುದ್ರವು ತನ್ನೊಳಗಿದ್ದ ಸತ್ತವರನ್ನು ಒಪ್ಪಿಸಿತು; ಮೃತ್ಯುವೂ ಪಾತಾಳವೂ ತಮ್ಮ ವಶದಲ್ಲಿದ್ದ ಸತ್ತವರನ್ನು ಒಪ್ಪಿಸಿದವು." ಮರಣ ಹಾಗೂ ಪಾತಾಳಗಳ ಅಗತ್ಯತೆಯು ಇನ್ನು ಇರಲಿಲ್ಲವಾದ್ದರಿಂದ, ಅವುಗಳನ್ನು ನಿರ್ಮೂಲನೆ ಮಾಡಲಾಯಿತು (20:14). 21:1ರ ಮುಕ್ತಾಯದ ಮಾತುಗಳು ಆ ಸಂದೇಶಕ್ಕೆ ಅನುಸರಣೆ ಆಗಿರಬೇಕಷ್ಟೆ, **ಸಮುದ್ರವೂ** ತೆಗೆದು ಹಾಕಲ್ಪಟ್ಟಿತು ಎಂಬುದನ್ನು ಒತ್ತಿ ಹೇಳುತ್ತದೆ. ಹೇಗೂ, "ಇನ್ನು ಸಮುದ್ರವೂ ಇಲ್ಲ" ಎಂಬ ಮಾತುಗಳಿಗೆ ಸಂಬಂಧಿಸಿದಂತೆ ಇರುವ ಅತ್ಯಂಥ ಜನಪ್ರಿಯವಾದ ಊಹೆಯೆಂದರೆ ಪ್ರಕಟನೆ ಪುಸ್ತಕದಲ್ಲಿ "ಸಮುದ್ರ"ದ ಭಾವನೆಯು *ಅಗಲುವಿಕೆ* ಆಗಿರುತ್ತದೆ. ಮೆಡಿಟೆರ್ರೇನಿಯನ್ ಸಮುದ್ರವು ಯೋಹಾನನನ್ನು ಆಸ್ಯ ಸೀಮೆಯಲ್ಲಿದ್ದ ಆತನ ಮಿತ್ರರಿಂದ ಅಗಲಿಕೆಯನ್ನುಂಟು ಮಾಡಿತ್ತು. ಅದೇ ರೀತಿಯಲ್ಲಿಯೇ, ಪ್ರಕಟನೆ ಪುಸ್ತಕದ ಆರಂಭದಲ್ಲಿ, ಸಿಂಹಾಸನದ ಮುಂದೆ ಒಂದು ಸಮುದ್ರವಿರುವಂತೆ ಚಿತ್ರಿಸಲಾಗಿರುತ್ತದೆ, ಮನುಷ್ಯರನ್ನು ದೇವರಿಂದ ಅಗಲಿಸುವಂಥದ್ದಾಗಿ ಕಾಣಿಸುತ್ತದೆ (4:6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈಗ ಕೊನೆಗೂ ಸಮುದ್ರವು ಹೊರಟು ಹೋಗಿದ್ದರಿಂದ, ಮತ್ತು ದೇವರು ತನ್ನ ಜನರ ಮಧ್ಯದಲ್ಲಿ ನಿವಾಸ ಮಾಡುವೆನೆಂದು ಘೋಷಣೆ ಮಾಡಿದನು (21:3). ಅನೇಕ ಲೇಖಕರು ಯೋಹಾನನ ದಿನದಲ್ಲಿ ಸಮುದ್ರವು ಜನರಿಗೆ ಭಯದ ಮೂಲವಾಗಿತ್ತೆಂಬುದಾಗಿ ಈ ಯೋಚನೆಗೆ ಇನ್ನಷ್ಟು

ಸೇರಿಸುತ್ತಾರೆ (ನೋಡಿರಿ ಕೀರ್ತನೆ 107:25-28; ಯೆಶಾಯ 57:20; ಯೆಹೆಜ್ಕೇಲ 28:8). ಅವರು "ಇನ್ನು ಸಮುದ್ರವೂ ಇಲ್ಲ" ಎಂಬ ಪದಗುಚ್ಛವನ್ನು ನಂಬಿಗಸ್ತರ ನಿತ್ಯವಾದ ನಿವಾಸದಲ್ಲಿ ಭಯವು ನಿರ್ಮೂಲನೆ ಮಾಡಲ್ಪಡುವದು ಎಂಬರ್ಥವು ಬರುವಂತೆ ಅರ್ಥನಿರೂಪಣೆ ಮಾಡುತ್ತಾರೆ.

"ಸಮುದ್ರವೂ ಇಲ್ಲ" ಎಂಬ ಚಿತ್ರಣವನ್ನು ಬಳಸಿರುವದು ನೂತನ ಆಕಾಶ ಮತ್ತು ಭೂಮಿಗಳು ತೀವ್ರವಾದ ರೀತಿಯಲ್ಲಿ *ಭಿನ್ನವಾಗಿ* ಇರಲಿವೆ ಎಂಬ ವಾಸ್ತವಾಂಶವನ್ನು ನಾಟಕೀಯಗೊಳಿಸುವ ಉದ್ದೇಶದಿಂದ ಬಳಸಿರಬಹುದಾಗಿದೆ. ಈಗಿನ ಭೂಮಿಯು ಮೂಕ್ಕಾಲು ಭಾಗ ನೀರಿನಿಂದ ಆವರಿಸಲ್ಪಟ್ಟಿರುತ್ತದೆ. ಹಾಗಿಲ್ಲವಾದ್ದಲ್ಲಿ, ಈಗ ನಮಗೆ ತಿಳಿದಿರುವಂತೆ ಈ ಭೂಗ್ರಹದ ಮೇಲಿನ ಜೀವನವು ಅಸಾಧ್ಯವಾಗಿರುತ್ತಿತ್ತು. ಅದಕ್ಕೆ ತದ್ವಿರುದ್ಧಾಗಿ, "ನೂತನಭೂಮಂಡಲ"ದಲ್ಲಿ ಸಮುದ್ರವೇ ಇರುವದಿಲ್ಲ. ಇದು ವಿಶಿಷ್ಟವಾಗಿದೆ, ಇದು *ಹೊಸ*ದಾಗಿದೆ.

ಈ ಯೋಚನೆಯು ನಮಗೆ ವಾಕ್ಯಭಾಗದಲ್ಲಿರುವ ಒತ್ತಿನ ಕಡೆಗೆ ಹಿಂದಿರುಗಿ ಬರುವಂತೆ ಮಾಡುತ್ತದೆ: ಪರಲೋಕದ *ಹೊಸತನ.* 1 ಮತ್ತು 2 ವಚನಗಳಲ್ಲಿರುವ **ನೂತನ** ಎಂಬ ಪದವು ಗ್ರೀಕ್ ಭಾಷೆಯ καινός (*kainos*) ಎಂಬ ಪದದಿಂದ ಅನುವಾದಿಸಲ್ಪಟ್ಟಿದ್ದು, ಅದರರ್ಥವು "ಗುಣ ಅಥವಾ ವಿಧದಲ್ಲಿ ನೂತನವಾದದ್ದು" ಎಂದಾಗಿದೆ.[10] "ನೂತನ" ಎಂಬುದಕ್ಕೆ ಗ್ರೀಕ್ ಭಾಷೆಯಲ್ಲಿ ಇನ್ನೊಂದು ಪದವಿರುತ್ತದೆ, ಅದು νέος (*neos*), ಇದು ಪ್ರಕಟನೆ ಪುಸ್ತಕದಲ್ಲಿ ಕಾಣಿಸಿಕೊಳ್ಳುವದಿಲ್ಲ. ಯೋಹಾನನು "ಒಂದೇ ಸಂಗತಿಯ ಹೊಸದೊಂದು ಆವೃತ್ತಿಯನ್ನು ಎದುರುನೋಡುತ್ತಿದ್ದಿಲ್ಲ."[11]

**ವಚನ 2.** ಯೋಹಾನನು ಮುಂದುವರೆದು ಹೀಗೆ ಹೇಳುತ್ತಾನೆ, **ಇದಲ್ಲದೆ ಪರಿಶುದ್ಧ ಪಟ್ಟಣವಾದ ಹೊಸ ಯೆರೂಸಲೇಮು ಪರಲೋಕದಿಂದ ದೇವರ ಬಳಿಯಿಂದ ಇಳಿದುಬರುವದನ್ನು ಕಂಡೆನು.** ಪ್ರಕಟನೆ ಪುಸ್ತಕದಲ್ಲಿ ಈ ಮುಂಚೆ, ಯೇಸುವು "ಇದಲ್ಲದೆ ... ನನ್ನ ದೇವರ ಬಳಿಯಿಂದ ಪರಲೋಕದೊಳಗಿಂದ ಇಳಿದುಬರುವ ಹೊಸ ಯೆರೂಸಲೇಮ್ ಪಟ್ಟಣವೆಂಬ ನನ್ನ ದೇವರ ಪಟ್ಟಣ" ಎಂದು ಉಲ್ಲೇಖಿಸಿದ್ದನು (3:12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಹೊಸ ಒಡಂಬಡಿಕೆಯಲ್ಲಿ ಹಲವಾರು ಸಾರಿ, ಫಿಲಿಷ್ಟಿಯದಲ್ಲಿರುವ "ಹಳೆಯ," ಭೂಲೋಕದ ಯೆರೂಸಲೇಮನ್ನು **ಹೊಸ,** ಪರಲೋಕದ **ಯೆರೂಸಲೇಮ**ನೊಂದಿಗೆ ವಿರುದ್ಧ ಹೋಲಿಕೆ ಮಾಡಲ್ಪಟ್ಟಿರುತ್ತದೆ. ಉದಾಹರಣೆಗೆ, ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಪೌಲನು ಬಳಸುವ ಅನ್ಯೋಕ್ತಿಯಲ್ಲಿ, ಆತನು ಹಾಗರಳು "ಈಗಿನ ಯೆರೂಸಲೇಮ್ ಎಂಬವಳಿಗೆ ಸರಿಬೀಳುತ್ತಾಳೆ; ಹೇಗಂದರೆ, ಈಕೆ ತನ್ನ ಮಕ್ಕಳ ಸಹಿತ ದಾಸತ್ವದಲ್ಲಿದ್ದಾಳೆ. ಆದರೆ *ಮೇಲಣ ಯೆರೂಸಲೇಮ್* ಎಂಬವಳು ಸ್ವತಂತ್ರಳು, ಇವಳೇ ನಮಗೆ ತಾಯಿ" (ಗಲಾತ್ಯ 4:25, 26; ಒತ್ತಿ ಹೇಳಿದ್ದು ನನ್ನದು). ಪುನಃ, ಇಬ್ರಿಯರಿಗೆ ಪತ್ರಿಕೆಯ ಲೇಖಕನು ಯೆಹೂದಿಮತದ ಮೇಲೆ ಕ್ರೈಸ್ತತ್ವದ ಸರ್ವೋಚ್ಛತೆಯನ್ನು ಕುರಿತು ಒತ್ತಿ ಹೇಳುವವನಾಗಿ, ಹೀಗೆ ಬರೆದನು,

> ಆದರೆ ನೀವು [ಕ್ರೈಸ್ತರು] ಚೀಯೋನ್ ಪರ್ವತಕ್ಕೂ *ಜೀವಸ್ವರೂಪನಾದ ದೇವರ ಪಟ್ಟಣವಾಗಿರುವ ಪರಲೋಕದ ಯೆರೂಸಲೇಮಿಗೂ* ಉತ್ಸವಸಂಘದಲ್ಲಿ ಕೂಡಿರುವ ಕೋಟ್ಯಾನುಕೋಟಿ ದೇವದೂತರ ಬಳಿಗೂ ಪರಲೋಕದಲ್ಲಿ ಹೆಸರು ಬರಸಿಕೊಂಡಿರುವ ಚೊಚ್ಚಲಮಕ್ಕಳ ಸಭೆಗೂ ಎಲ್ಲರಿಗೆ ನ್ಯಾಯಾಧಿಪತಿಯಾಗಿರುವ ದೇವರ ಬಳಿಗೂ ಸಿದ್ಧಿಗೆ ಬಂದಿರುವ ನೀತಿವಂತರ ಆತ್ಮಗಳ ಬಳಿಗೂ ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿರುವ

ಯೇಸುವಿನ ಬಳಿಗೂ ... ಬಂದಿದ್ದೀರಿ (ಇಬ್ರಿಯ 12:22-24; ಒತ್ತಿ ಹೇಳಿದ್ದು ನನ್ನದು).

ಯೋಹಾನನು ಪ್ರಕಟನೆ ಪುಸ್ತಕವನ್ನು ಬರೆದ ವೇಳೆಯಲ್ಲಿ "ಮೊದಲಿದ್ದ" ಯೆರೂಸಲೇಮು ಇಪ್ಪತ್ತಕ್ಕೂ ಹೆಚ್ಚು ವರ್ಷಗಳ ಮುಂಚೆಯೇ ರೋಮನ್ನರಿಂದ ನಾಶಗೊಳಿಸಲ್ಪಟ್ಟಿತ್ತು; ಹೇಗೂ, ಕ್ರೈಸ್ತರು "ಹೊಸ" ಯೆರೂಸಲೇಮ್ ಪಟ್ಟಣವನ್ನು ಎದುರುನೋಡಬಹುದಾಗಿತ್ತು - ಯಾವ ಪಟ್ಟಣವನ್ನು "ದೇವರು ಸಂಕಲ್ಪಿಸಿ ನಿರ್ಮಿಸಿದ"ನೋ ಆ ನಿತ್ಯವಾದ ಪಟ್ಟಣ (ಇಬ್ರಿಯ 11:10; ನೋಡಿರಿ ಇಬ್ರಿಯ 13:14). ಈ ಪಟ್ಟಣವು 21:10-22:5ರಲ್ಲಿ ವಿವರವಾಗಿ ಬಣ್ಣಿಸಲ್ಪಡಲಿದೆ.

ಒಬ್ಬ ವ್ಯಕ್ತಿಯು ಪರಲೋಕದ ಕುರಿತು ಯೋಚಿಸುವಾಗ, ಆತನು ಊರುಗಳ ಹಾಗೂ ಪಟ್ಟಣಗಳ ಪ್ರಯೋಜನಾತ್ಮಕ ಅಂಶಗಳ ಕುರಿತು ಆತನು ಹೊಂದಿರಬೇಕಾದ ಒಂದು ಆಲೋಚನೆಯಾಗಿದೆ. William Hendriksenನು ಹೇಳಿದ್ದೇನೆಂದರೆ, "ಒಂದು ಪಟ್ಟಣವು ನಮಗೆ ಒಂದು ಶಾಶ್ವತವಾದ ನಿವಾಸವನ್ನು, ಬಹಳಷ್ಟು ಸಂಖ್ಯೆಯಲ್ಲಿ ನಿವಾಸಿಗಳಿರುವದನ್ನು, ಸುರಕ್ಷತೆ ಮತ್ತು ಭದ್ರತೆ, ಅನ್ಯೋನ್ಯತೆ, ಸೌಂದರ್ಯ ಇವುಗಳ ಭಾವನೆಯನ್ನು ನೆನಪಿಗೆ ತರುತ್ತದೆ."[12] ಪರಲೋಕವು ಒಂದು ಏಕಾಂತತೆಯ ಸ್ಥಳವಲ್ಲ; ಕ್ರೈಸ್ತರು ಇತರರೊಂದಿಗೆ ಜೀವಿಸುವವರು, ಕೆಲಸ ಮಾಡುವವರು, ಹಾಗೂ ಸಂಬಂಧವನ್ನಿಟ್ಟುಕೊಳ್ಳುವವರು ಆಗಿರುತ್ತಾರೆ.

"ಹೊಸ ಯೆರೂಸಲೇಮು" **ಪರಲೋಕದಿಂದ ದೇವರ ಬಳಿಯಿಂದ ಇಳಿದು ಬರುವದರ** ಚಿತ್ರಣವು ಕೆಲವರಿಗೆ ಇದು ಭೂಮಿಯ ಮೇಲಿರುವ ಸಭೆಯನ್ನು ಸೂಚಿಸುತ್ತದೆಂಬುದಕ್ಕೆ ಪುರಾವೆಯಾಗಿರುತ್ತದೆ. "ಪರಲೋಕವು ಹೇಗೆ ಪರಲೋಕದಿಂದ ಇಳಿದು ಬರಬಲ್ಲದು?" ಎಂದು ಅವರು ಕೇಳುತ್ತಾರೆ. ಬಹುಶಃ ಅವರು ಭಾಷೆಯು ಸಾಂಕೇತಿಕವಾಗಿರುತ್ತದೆಂಬ ವಾಸ್ತವಾಂಶದ ಮೇಲಿಂದ ದೃಷ್ಟಿಯನ್ನು ಕಳೆದುಕೊಂಡಿರುತ್ತಾರೆಂಬುದು ಸ್ಪಷ್ಟವಾಗಿರುತ್ತದೆ. ಅದಕ್ಕೆ ಪ್ರತ್ಯುತ್ತರವಾಗಿ, ನಾವು ಹೀಗೆ ಕೇಳಬಹುದು, "ಸ್ಥಳವು (ಪರಲೋಕ) ಈಗಾಗಲೇ ಅಸ್ತಿತ್ವದಲ್ಲಿರುವದಾದಲ್ಲಿ, ಯೇಸುವು ಏಕೆ ತಾನು ಒಂದು ಸ್ಥಳವನ್ನು ಸಿದ್ಧಮಾಡುವೆನು ಎಂದು ಹೇಳಿದನು?" (ಯೋಹಾನ 14:2). ಯೇಸುವು ಕೇವಲ ನಂಬಿಗಸ್ತರಿಗೋಸ್ಕರ *ಏರ್ಪಾಡು* ಮಾಡಲ್ಪಡುವದು ಎಂದಷ್ಟೇ ಹೇಳುತ್ತಿದ್ದಾನೆ. ಅದೇ ರೀತಿಯಲ್ಲಿ, ಪ್ರಕಟನೆ 21:2ನೇ ವಚನವು ತನ್ನ ಜನರಿಗೋಸ್ಕರ (ಸಭೆ) ದೇವರು ಒಂದು ಸ್ಥಳವನ್ನು (ಪರಲೋಕ) ಸಿದ್ಧ ಮಾಡಿಟ್ಟಿದ್ದಾನೆಂಬುದನ್ನು ಒತ್ತಿ ಹೇಳುತ್ತದೆ. ಈ ಮಹಿಮಕರಣಗೊಂಡ ಸಭೆಯ ಮೇಲಿನ ಒತ್ತು ಕ್ರೈಸ್ತರ ಯುಗದಲ್ಲಿ ವಿಮೋಚಿಸಲ್ಪಟ್ಟವರು ಮಾತ್ರವೇ ಪರಲೋಕದಲ್ಲಿರುವೆಂಬುದನ್ನು ಸೂಚಿಸುವದಿಲ್ಲ (ವ. 12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅಲ್ಲಿ ಹಳೆಯ ಒಡಂಬಡಿಕೆಯ ಕಾಲದ ನಂಬಿಗಸ್ತರು ಸಹ ಇರುವರೆಂಬುದನ್ನು ಇತರ ವಾಕ್ಯಭಾಗಗಳು ಸ್ಪಷ್ಟಗೊಳಿಸುತ್ತವೆ (ನೋಡಿರಿ ಇಬ್ರಿಯ 11:39, 40). ಹೇಗೂ, ಪ್ರಕಟನೆ ಪುಸ್ತಕದ ಉದ್ದೇಶವು *ಹಿಂಸೆಗೊಳಗಾಗಿದ್ದ ಸಭೆಯನ್ನು* ಪ್ರೋತ್ಸಾಹಿಸುವದು ಆಗಿತ್ತಾದಾದ್ದರಿಂದ, ಪ್ರಕಟನೆ ಪುಸ್ತಕದ ಕಡೇ ಎರಡು ಅಧ್ಯಾಯಗಳಲ್ಲಿ ಜಯಶಾಳಿ ಸಭೆಯೇ ಮುಖ್ಯ ಗಮನದಲ್ಲಿರುತ್ತದೆ.

"ಪರಲೋಕದಿಂದ ಇಳಿದುಬರುವದು" ಎಂಬ ಮಾತುಗಳ ವಿಷಯದಲ್ಲಿ ಹೇಳುವದಾದರೆ, "ಹೊಸ ಯೆರೂಸಲೇಮು" ಅಕ್ಷರಶಃ ಪರಲೋಕದಿಂದ ಭೂಮಿಗೆ ಇಳಿದು ಬರುವದಿಲ್ಲ. ಅದು ಹಳೆಯ ಶಾರೀರಿಕ ಭೂಮಿಗೆ ಇಳಿದು ಬರುವದಕ್ಕೆ ಸಾಧ್ಯವಿಲ್ಲ, ಯಾಕೆಂದರೆ ಆ ಭೂಮಿಯು ಗತಿಸಿ ಹೋಗಿರುತ್ತದೆ. ಅಷ್ಟುಮಾತ್ರವಲ್ಲದೆ, ಈಗಾಗಲೇ ಗಮನಿಸಿರುವ ಪ್ರಕಾರ, "ಹೊಸ ಆಕಾಶಮಂಡಲ" ಹಾಗೂ "ಹೊಸ ಭೂಮಂಡಲ" ನಡುವೆ ಯಾವದೇ ಭಿನ್ನತೆಗಳನ್ನು ಗುರುತಿಸುವ ಕೆಲಸವನ್ನು ಶೀಘ್ರವೇ ನಿಲ್ಲಿಸಲ್ಪಡುತ್ತವೆ. "... ದೇವರ ಬಳಿಯಿಂದ

ಇಳಿದುಬರುವದು" ಎಂಬ ಮಾತುಗಳ ಉದ್ದೇಶವು ದಿಕ್ಕನ್ನಾಗಲಿ ಅಥವಾ ಗಮ್ಯತೆಯನ್ನಾಗಲಿ ಸೂಚಿಸುವದಾಗಿರಲಿಲ್ಲ, ಆದರೆ ದೈವಿಕ *ಉಗಮಸ್ಥಾನ*ವನ್ನು ಸೂಚಿಸುವದೇ ಆಗಿತ್ತು (ನೋಡಿರಿ 10:1; 16:21; 18:1; 20:1, 9). "ನಿತ್ಯವಾದ ಧನ್ಯತೆಯು ಮನುಷ್ಯನಿಂದ ಸಾಧಿಸಿಕೊಳ್ಳಲ್ಪಟ್ಟದ್ದಲ್ಲ ಆದರೆ ದೇವರಿಂದ ಬಂದ ಒಂದು ವರವೇ."[13]

ಈ ಮುಂಚೆ ಪ್ರಸ್ತಾಪಿಸಲ್ಪಟ್ಟಿರುವ ಪ್ರಕಾರವೇ, ಪ್ರಕಟನೆ ಪುಸ್ತಕದಲ್ಲಿ ಸ್ಥಳ (ಪರಲೋಕ) ಮತ್ತು ಜನರ (ಸಭೆ) ನಡುವೆ ಭಿನ್ನತೆಯನ್ನು ಗುರುತಿಸುವದು ಅನೇಕ ಸಾರಿ ಕಷ್ಟಕರವಾಗಿರುತ್ತದೆ. 2ನೇ ವಚನವು ಆ ವಾಸ್ತವಾಂಶಕ್ಕೆ ದೃಷ್ಟಾಂತವನ್ನು ಒದಗಿಸುತ್ತದೆ. ಪಟ್ಟಣದ ಸಾದೃಶ್ಯವನ್ನ ಬಳಸಿದ ಬಳಿಕ, ಯೋಹಾನನು ಮತ್ತೊಂದು ಸಂಕೇತದ ಕಡೆಗೆ ಸಾಗುತ್ತಾನೆ. ಮಹಾನಗರವು **ತನ್ನ ಗಂಡನಿಗೋಸ್ಕರ ಅಲಂಕೃತಳಾದ ಮದಲಗಿತ್ತಿಯಂತೆ ಶೃಂಗರಿಸಲ್ಪಟ್ಟಿತ್ತು**. ಸ್ವಲ್ಪ ಹೊತ್ತಿನ ನಂತರದಲ್ಲಿ, ಪಟ್ಟಣವು "ಯಜ್ಞದ ಕುರಿಯಾದಾತನಿಗೆ ಹೆಂಡತಿಯಾಗತಕ್ಕ ಮದಲಗಿತ್ತಿ" (ವ. 9) ಎಂದು ಬಣ್ಣಿಸಲ್ಪಡುವದು.

ಪೌಲನು *ಸಭೆ*ಯನ್ನು ಕ್ರಿಸ್ತನ **ಮದಲಗಿತ್ತಿ** ಎಂದು ಕರೆದನು (2 ಕೊರಿಂಥ 11:2; ಎಫೆಸ 5:22-32; ನೋಡಿರಿ ರೋಮಾ 7:4). ಒಂದು ಸಮಯವು ಬರುತ್ತದೆ ಆಗ ಯೇಸುವು "ಅದನ್ನು ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳುವನು" ಎಂದು ಹೇಳಿದನು (ಎಫೆಸ 5:27). 21:2ನೇ ವಚನವು "ದೇವರ ಸಭೆಯ ಕುರಿತು ... ತನ್ನ ವಿಮೋಚಕನೊಂದಿಗೆ ಪರಿಪೂರ್ಣವಾದ ಸಹವಾಸವನ್ನು ಹೊಂದುವದಕ್ಕೆ ಮಹಿಮಕರಣಗೊಂಡು ಸಿದ್ಧಳಾಗಿರುವಂಥದ್ದು"[14] ಎಂಬುದಾಗಿ ಬಹುಪಾಲು ಲೇಖಕರು ಒಪ್ಪಿಕೊಳ್ಳುತ್ತಾರೆ. 19ನೇ ಅಧ್ಯಾಯದ ವೇಳೆಯಿಂದಲೂ, ವಾಚಕನು "ಯಜ್ಞದ ಕುರಿಯಾದಾತನ ವಿವಾಹವನ್ನು" (19:7) ಮತ್ತು ಆತನ "ವಿವಾಹದ ಔತಣ"ವನ್ನು (19:9) ನಿರೀಕ್ಷಿಸಿಕೊಂಡಿರುತ್ತಾನೆ. ಕೊನೆಗೂ, 21:2ರಲ್ಲಿ, ವಾಚಕನನ್ನು ಕೊಂಡಾಟದ ಸಮಯಕ್ಕೆ ಕರೆದುಕೊಂಡು ಬರಲಾಗಿರುತ್ತದೆ. ಒಬ್ಬರು "ಪರಲೋಕದಲ್ಲಿ ಅತ್ಯಂಥ ಸಂತೋಷದ ಕ್ಷಣ" ಕುರಿಯಾದಾತನ ವಿವಾಹವೇ ಆಗಿರುತ್ತದೆಂದು ಹೇಳಿರುತ್ತಾರೆ.

ಮದಲಗಿತ್ತಿಯು **ತನ್ನ ಗಂಡನಿಗೋಸ್ಕರ ಅಲಂಕೃತಳಾಗಿ**ರುವದರ ಸಂಕೇತವು ಸಭೆಯ ಮಹಿಮೆಯನ್ನು ಕುರಿತು ತಿಳಿಸುತ್ತದೆ. ಒಬ್ಬ ಮದಲಗಿತ್ತಿಯು ಸುಂದರಳು; ಆಕೆಯೊಳಗಿಂದ ಏನೋ ಹೊಳೆಯುವಂಥದ್ದಾಗಿದ್ದು ಆಕೆಯನ್ನು ರೂಪಾಂತರಗೊಳಿಸುತ್ತದೋ ಎಂಬಂತಿರುತ್ತದೆ. ಅಷ್ಟುಮಾತ್ರವಲ್ಲದೆ, ವಿವಾಹದ ಸಾದೃಶ್ಯವು ತನ್ನ ಸಭೆಯ ಮೇಲೆ ಯೇಸುವಿಗೆ ಇರುವ ನಿರಂತರವಾದ ಪ್ರೀತಿಯನ್ನು ಕುರಿತು ಮಾತಾಡುವದಾಗಿದೆ.

**ವಚನ 3.** ಯೋಹಾನನು ಹೀಗೆ ಹೇಳಿದನು, **ಇದಲ್ಲದೆ ಸಿಂಹಾಸನದೊಳಗಿಂದ ಬಂದ ಮಹಾ ಶಬ್ದವು ನನಗೆ ಕೇಳಿಸಿತು.** ಎಲ್ಲರಿಗೂ ಕೇಳಿಸುವಂತಾಗುವ ಹಾಗೆ ಮಾತಾಡಿದವನು ಮಹಾ ಶಬ್ದವನ್ನು ಬಳಸಿದನು. ಈ ಘಟನೆಯು ಯೋಹಾನನು **ಮಹಾ ಶಬ್ದ**ವನ್ನು ಕೇಳಿಸಿಕೊಂಡ ಅಂದಾಜು ಇಪ್ಪತ್ತು ಸಾರಿಗಳಲ್ಲಿ ಕೊನೆಯದಾಗಿರುತ್ತದೆ. ಮಾತಾಡಿದವನ ಗುರುತು ತಿಳಿಸಲ್ಪಟ್ಟಿರುವದಿಲ್ಲ; ಅದು ನಾಲ್ಕು ಜೀವಿಗಳಲ್ಲೊಬ್ಬನಿಂದ ಬಂದದ್ದಾಗಿರಬಹುದು. ಆ ಶಬ್ದವು ಹೀಗೆ ಹೇಳಿತ್ತು, **ಇಗೋ, ದೇವರ ನಿವಾಸವು ಮನುಷ್ಯರಲ್ಲಿ ಅದೆ.** ಈ ಸಾದೃಶ್ಯವು ಅರಣ್ಯದಲ್ಲಿ ಇಸ್ರಾಯೇಲ್ಯರ ಬಿಡಾರದ ಹೃದಯಭಾಗದಲ್ಲಿ ನಿರ್ಮಿಸಲ್ಪಟ್ಟಿದ್ದ ದೇವದರ್ಶನ ಗುಡಾರವನ್ನು ಜ್ಞಾಪಿಸುತ್ತದೆ. ದೇವದರ್ಶನ ಗುಡಾರವು ದೇವರು ಅವರೊಂದಿಗೆ ಇದ್ದಾನೆಂಬುದಕ್ಕೆ ಇಸ್ರಾಯೇಲ್ಯರಿಗೆ ಪುರಾವೆಯಾಗಿತ್ತು.

ಆ ಶಬ್ದವು ಮುಂದುವರೆದು ಹೇಳಿದ್ದೇನೆಂದರೆ, **ಆತನು ಅವರೊಡನೆ ವಾಸಮಾಡುವನು, ಅವರು ಆತನಿಗೆ ಪ್ರಜೆಗಳಾಗಿರುವರು; ದೇವರು ತಾನೇ ಅವರ ಸಂಗಡ 0ಇರುವನು.** (ಈ ವಾಗ್ದಾನವನ್ನು ಯಾಜಕಕಾಂಡ 26:12 ಮತ್ತು ಯೆಹೆಜ್ಕೇಲ 36:28ರೊಂದಿಗೆ ಹೋಲಿಕೆ ಮಾಡಿರಿ.) **ಪ್ರಜೆ** ಎಂಬುದಕ್ಕೆ ಬದಲಾಗಿ, ಗ್ರೀಕ್ ವಾಕ್ಯದಲ್ಲಿ "ಪ್ರಜೆಗಳು" (λαοί, *laoi*). ಎಂದಿರುತ್ತದೆ. ಬಹುವಚನ ಪದವನ್ನು "*ಯಾವ* ಜನರಲ್ಲಿಯಾದರೂ ದೇವರಿಗೆ ಭಯಪಟ್ಟು ನೀತಿಯನ್ನು ನಡಿಸುವವರು ಆತನಿಗೆ ಮೆಚ್ಚಿಗೆಯಾಗಿದ್ದಾರೆಂದು" ಒತ್ತಿ ಹೇಳುವದಕ್ಕಾಗಿ ಬಳಸಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 10:35; ಒತ್ತಿ ಹೇಳಿದ್ದು ನನ್ನದು). 7ನೇ ವಚನದಲ್ಲಿ ಕರ್ತನು ತನ್ನ ಜನರು ಹಾಗೂ ತನ್ನ ನಡುವಿನ ಹೊಸ ಸಂಬಂಧದ ನಿಕಟತೆಯನ್ನು ಪುನರ್ದೃಢೀಕರಿಸುತ್ತಾ ಹೀಗೆ ಸಮರ್ಥಿಸುತ್ತಾನೆ, "ನಾನು ಅವನಿಗೆ ದೇವರಾಗಿರುವೆನು, ಅವನು ನನಗೆ ಮಗನಾಗಿರುವನು" (ನೋಡಿರಿ 2 ಕೊರಿಂಥ 6:17, 18).

**ವಚನ 4.** ಈ ಹೊಸ ನಿಕಟತನದ ಫಲಿತವು ಏನಾಗಿರಲಿದೆ? ಮೊದನೆಯದಾಗಿ, ದೇವರು **ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು. ಇನ್ನು ಮರಣವಿರುವದಿಲ್ಲ, ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ; ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು. ಕಣ್ಣೀರನ್ನೆಲ್ಲಾ ಒರಸಿಬಿಡುವ** ವಾಗ್ದಾನವು ಈ ಮುಂಚೆ ಕೊಡಲ್ಪಟ್ಟಿದ್ದಾಗಿದೆ (7:16, 17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪಾಪವು ಲೋಕದೊಳಗೆ ಬಂದ ಕಾಲದಿಂದಲೂ ಸುರಿಸಲಾಗಿರುವ ಕಣ್ಣೀರುಗಳ ಸಮುದ್ರವನ್ನು ಕುರಿತು ಯೋಚಿಸಿರಿ. ಪರಲೋಕದಲ್ಲಿ, ದೇವರು ಪ್ರತಿಯೊಂದು ಕಣ್ಣೀರನ್ನು ಒಣಗಿಸುವನು. ಆತನು ಕಣ್ಣೀರನ್ನುಂಟು ಮಾಡುವಂಥದ್ದನ್ನು ಸಹ ನೀಗಿಸುವನು. ಕಣ್ಣೀರಿನ ಒಂದು ದೊಡ್ಡ ಮೂಲವೆಂದರೆ ಮರಣವೇ. ಜನರು ತೆರೆದ ಸಮಾಧಿಗಳ ಬಳಿಯಲ್ಲಿ ನಿಂತು, ತಮಗೆ ಪ್ರಿಯರಾದವರೊಬ್ಬರಿಗೆ ವಿದಾಯವನ್ನು ಹೇಳುತ್ತಾ ನಿಂತವರಾಗಿದ್ದಾರೆ. ಪರಲೋಕದಲ್ಲಿ, **ಇನ್ನು ಮರಣವಿರುವದಿಲ್ಲ** (ನೋಡಿರಿ 20:14). ಹೀಗೆ ಆದಿಕಾಂಡ 3ರಲ್ಲಿನ ಶಾಪವು ರದ್ದುಗೊಳಿಸಲ್ಪಡುವದು (ನೋಡಿರಿ ಆದಿಕಾಂಡ 3:3, 19).

ಅಲ್ಲದೆ **ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ** ಯಾಕೆಂದರೆ **ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು**. ಲೋಕದೊಳದಗೆ ಪಾಪವು ಪ್ರವೇಶಿಸಿದ ಕಾಲದಿಂದಲೂ ಜನರ ಜೀವಿತಗಳನ್ನು ಮಂಕುಗೊಳಿಸಿರುವಂಥದ್ದೆಲ್ಲಾ ಕಣ್ಮರೆಯಾಗುವದು. ಏಕೆ 4ನೇ ವಚನವು ಪರಲೋಕವನ್ನು ಸಕಾರಾತ್ಮಕ ವಿಧದ ಬದಲಾಗಿ ನಕಾರಾತ್ಮಕ ವಿಧದಲ್ಲಿ ಬಣ್ಣಿಸುತ್ತದೆ? ಬಹುಶಃ ಜನರು ವಾಗ್ದಾನಗಳೊಂದಿಗೆ ಆ ವಿಧದಲ್ಲಿ ತಮ್ಮನ್ನು ಗುರುತಿಸಿಕೊಳ್ಳಲಿ ಎಂದಾಗಿರಬಹುದು. ಎಲ್ಲರಿಗೂ ಸಂತೋಷವೆಂದರೆ ಏನೆಂಬುದು ತಿಳಿದಿರುವದಿಲ್ಲ, ಆದರೆ ದುಃಖವನ್ನು ಎಲ್ಲರೂ ಬಲ್ಲರು. ಕೆಲವರು ಎಂದಿಗೂ ನಕ್ಕ ಸಂದರ್ಭಗಳಿರುವದಿಲ್ಲ, ಆದರೆ ಎಲ್ಲರೂ ಅತ್ತಿರುತ್ತಾರೆ. ಕೆಲವರು ನೋವಿನಿಂದ ಎಂದಿಗೂ ಬಿಡುಗಡೆಯನ್ನು ಹೊಂದಿರುವದಿಲ್ಲ, ಆದರೆ ಬಾಧೆಯನ್ನನುಭವಿಸುವದೆಂದರೆ ಏನೆಂಬುದು ಎಲ್ಲರಿಗೂ ಗೊತ್ತದೆ. ರೋಗ ಮತ್ತು ದುಃಖಗಳು ಇತಿಹಾಸವಾಗಿರುವಂಥ, ಎಲ್ಲರೂ ನಿತ್ಯವಾದ ಸಂತೋಷವನ್ನು ಪಡೆದುಕೊಳ್ಳಬಹುದಾದ ಒಂದು ಸ್ಥಳವಿದೆ ಎಂಬುದನ್ನು ಗ್ರಹಿಸಿಕೊಳ್ಳುವದು ಅದ್ಭುತಕರವಾಗಿರುವದಲ್ಲವೇ?

ಯಾರಾದರೊಬ್ಬರು ಜನರಿಗೆ 4ನೇ ವಚನದಲ್ಲಿರುವ ವಾಗ್ದಾನಗಳೊಳಗೆ - ಕಣ್ಣೀರಾಗಲಿ, ಮರಣವಾಗಲಿ, ಅಥವಾ ನೋವಾಗಲಿ ಇಲ್ಲದಿರುವ ಸ್ಥಳ - ಒಂದೇ *ಒಂದು* ಆಶೀರ್ವಾದವಿರುವಂಥ ದ್ವೀಪವೊಂದು ಇರುತ್ತದೆಂದು ಮನವರಿಕೆ ಮಾಡುವದಾದಲ್ಲಿ, ಅವರು ಆ ಆಶ್ರಯಧಾಮಕ್ಕೆ ಹೋಗುವದನ್ನು ಖಾತ್ರಿ ಪಡಿಸಿಕೊಳ್ಳುವದಕ್ಕಾಗಿ ತಮ್ಮದೆಲ್ಲವನ್ನೂ

ಮಾರಿಕೊಳ್ಳುವರು. ಇದು ಎಷ್ಟು ವಿಚಿತ್ರವೆಂದರೆ ಈ *ಎಲ್ಲಾ* ವಾಗ್ದಾನಗಳು ಸತ್ಯವಾಗಿರುವಂಥ ಸ್ಥಳವೊಂದಿರುತ್ತದೆ, ಮತ್ತು ಹಾಗಿದ್ದಾಗ್ಯೂ ಅನೇಕರು ತಾವು ಅಲ್ಲಿಗೆ ಹೋಗುವರೋ ಇಲ್ಲವೋ ಎಂಬ ವಿಷಯದಲ್ಲಿ ಅಸಡ್ಡೆ ತೋರುತ್ತಾರೆ.

## ಸಮಸ್ತವೂ ಹೊಸದು ಮಾಡಲ್ಪಟ್ಟದ್ದು (21:5-8)

**5ಆಗ ಸಿಂಹಾಸನದ ಮೇಲೆ ಕೂತಿದ್ದವನು - ಇಗೋ, ಎಲ್ಲವನ್ನು ಹೊಸದುಮಾಡುತ್ತೇನೆ ಅಂದನು. ಮತ್ತು ನನಗೆ - ಇದನ್ನು ಬರೆ; ಈ ಮಾತುಗಳು ನಂಬತಕ್ಕವುಗಳೂ ಸತ್ಯವಾದವುಗಳೂ ಆಗಿವೆ ಎಂದು ಹೇಳಿದನು.**
**6ಆಗ ಸಿಂಹಾಸನದ ಮೇಲೆ ಕೂತಿದ್ದವನು - ಎಲ್ಲಾ ನೆರವೇರಿತು; ನಾನೇ ಆದಿಯೂ ಅಂತವೂ ಪ್ರಾರಂಭವೂ ಸಮಾಪ್ತಿಯೂ ಆಗಿದ್ದೇನೆ. ದಾಹವುಳ್ಳವನಿಗೆ ಜೀವಜಲದ ಬುಗ್ಗೆಯಲ್ಲಿ ಕ್ರಯವಿಲ್ಲದೆ ಕುಡಿಯುವದಕ್ಕೆ ಕೊಡುವೆನು.**
**7ಜಯಹೊಂದುವವನು ಇವುಗಳಿಗೆ ಬಾಧ್ಯನಾಗುವನು; ನಾನು ಅವನಿಗೆ ದೇವರಾಗಿರುವೆನು, ಅವನು ನನಗೆ ಮಗನಾಗಿರುವನು.**
**8ಆದರೆ ಹೇಡಿಗಳು, ನಂಬಿಕೆಯಿಲ್ಲದವರು, ಅಸಹ್ಯವಾದದ್ದರಲ್ಲಿ ಸೇರಿದವರು, ಕೊಲೆಗಾರರು, ಜಾರರು, ಮಾಟಗಾರರು, ವಿಗ್ರಹಾರಾಧಕರು, ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೆಯ ಮರಣವು ಎಂದು ನನಗೆ ಹೇಳಿದನು.**

**ವಚನ 5.** ವಾಕ್ಯಭಾಗದ ಕೇಂದ್ರಿಯ ವಾಗ್ದಾನವು ಎಷ್ಟೊಂದು ಅತ್ಯಾಶ್ಚರ್ಯವಾಗಿದೆ: **ಆಗ ಸಿಂಹಾಸನದ ಮೇಲೆ ಕೂತಿದ್ದವನು - ಇಗೋ, ಎಲ್ಲವನ್ನು ಹೊಸದುಮಾಡುತ್ತೇನೆ ಅಂದನು.** ಈ ವಾಗ್ದಾನವು ವರ್ತಮಾನಕಾಲ ರೂಪದಲ್ಲಿರುತ್ತದೆ. ದೇವರು ಈಗಾಗಲೇ ಎಷ್ಟೋ ಹೊಸದನ್ನು ಮಾಡಿದ್ದಾನೆ. ಕ್ರೈಸ್ತರಿಗೆ ಒಂದು ಹೊಸ ಒಡಂಬಡಿಕೆ ಇರುತ್ತದೆ (2 ಕೊರಿಂಥ 3:6; ಇಬ್ರಿಯ 8:8, 13; 9:15; 12:24), ಅದು ಒಂದು "ಹೊಸ ಆಜ್ಞೆಯನ್ನು" ಒಳಗೊಂಡಿರುತ್ತದೆ (ಯೋಹಾನ 13:34). ಕ್ರಿಸ್ತನಲ್ಲಿ ನಾವು ಹೊಸ ಸೃಷ್ಟಿಯಾಗಿದ್ದೇವೆ (2 ಕೊರಿಂಥ 5:17; ನೋಡಿರಿ ಗಲಾತ್ಯ 6:15; ಎಫೆಸ 4:24; ಕೊಲೊಸ್ಸೆ 3:10). ಕ್ರೈಸ್ತರು "ಜೀವವುಳ್ಳ ಹೊಸ ದಾರಿ"ಯಲ್ಲಿರುತ್ತಾರೆ (ಇಬ್ರಿಯ 10:20). ಆದಾಗ್ಯೂ, ಒಂದು ದಿನ, *ಸಮಸ್ತವೂ* ಹೊಸದು ಮಾಡಲ್ಪಡುವದು.

ಈ ಅತ್ಯಾಶ್ಚರ್ಯವಾದ ವಾಗ್ದಾನಗಳು ನಿಶ್ಚಯವಾದವುಗಳೆಂಬುದನ್ನು ನಾವು ಹೇಗೆ ತಿಳಿದುಕೊಳ್ಳಬಲ್ಲೆವು? ಕರ್ತನು ಯೋಹಾನನಿಗೆ ಹೀಗೆ ಹೇಳಿದನು, **ಇದನ್ನು ಬರೆ; ಈ ಮಾತುಗಳು ನಂಬತಕ್ಕವುಗಳೂ ಸತ್ಯವಾದವುಗಳೂ ಆಗಿವೆ** (ನೋಡಿರಿ 2 ತಿಮೊಥೆ 2:13; ಇಬ್ರಿಯ 6:18). ಯೋಹಾನನಿಗೆ ಈ ಪುಸ್ತಕದಲ್ಲಿ ಹಲವಾರು ಸಾರಿ **ಬರೆ** ಎಂದು ಅಪ್ಪಣೆ ಕೊಡಲಾಗಿರುತ್ತದೆ. ಪ್ರತಿ ಸಾರಿ, ಏನಾದರೂ ಒಂದು ಸಹಜವಾದ ರೀತಿಯಲ್ಲಿ ಮಹತ್ವಪೂರ್ಣವಾದದ್ದು ಇತ್ತು ಅಥವಾ ಪ್ರಕಟಗೊಳಿಸಲ್ಪಡುವದಿತ್ತು. ಬಹುಶಃ ಈ ಸಂದರ್ಭದಲ್ಲಿ, ಯೋಹಾನನು ತಾನು ಕೇಳಿಸಿಕೊಂಡ ಮತ್ತು ನೋಡಿದಂಥ ಸಂಗತಿಯಿಂದ ಬಹು ಅಚ್ಚರಿಗೊಂಡವನಾಗಿ ಬರೆಯುವದನ್ನು ನಿಲ್ಲಿಸಿದ್ದನು ಎಂದು ಕೆಲವರು ನಂಬುತ್ತಾರೆ. ಯೋಹಾನನು ಬರೆದ **ಮಾತುಗಳು ನಂಬತಕ್ಕವುಗಳೂ ಸತ್ಯವಾದವುಗಳೂ** ಎಂದು ಬಣ್ಣಿಸಲ್ಪಟ್ಟಿವೆ. ದೇವರು ಹೇಳುವ ಮಾತಿನ ಮೇಲೆ ಕ್ರೈಸ್ತರು ಆಧಾರವಾಗಿರಬಹುದಾಗಿದೆ.

**ವಚನ 6.** ಕರ್ತನು ಮುಂದುವರೆದು ಹೀಗೆ ಹೇಳಿದನು, **ಎಲ್ಲಾ ನೆರವೇರಿತು.** ವಾಕ್ಯವು ಅಕ್ಷರಶಃ "*ಅವುಗಳು* ಪೂರ್ತಿಗೊಳಿಸಲ್ಪಟ್ಟಿವೆ" - ಅಂದರೆ, ದೇವರು ವಾಗ್ದಾನ ಮಾಡಿದ್ದ ಎಲ್ಲಾ ಸಂಗತಿಗಳು - ಎಂದು ಹೇಳುತ್ತದೆ. ಆತನ ವಾಗ್ದಾನಗಳು ಎಷ್ಟೊಂದು

ಖಚಿತವಾದವುಗಳೆಂದರೆ ಅವುಗಳನ್ನು "ನೆರವೇರಿದವುಗಳೆಂದೇ" ಪರಿಗಣಿಸಲಾಗುತ್ತದೆ.

ಕ್ರೈಸ್ತರು ಏಕೆ ಭವಿಷ್ಯದ ವಿಷಯದಲ್ಲಿ *ಏಕೆ* ಭರವಸೆಯಿಂದಿರಬಲ್ಲರು? ಏಕೆಂದರೆ ದೇವರು ನಿತ್ಯನಾದವನು. ಆತನ ಹೀಗೆ ಹೇಳಿದನು, **ನಾನೇ ಆದಿಯೂ ಅಂತವೂ ಪ್ರಾರಂಭವೂ ಸಮಾಪ್ತಿಯೂ ಆಗಿದ್ದೇನೆ. ನಾನೇ** ಎಂಬ ಪದವು ಗ್ರೀಕ್ ಭಾಷೆಯಲ್ಲಿ ಒತ್ತಿ ಹೇಳಲ್ಪಟ್ಟದ್ದಾಗಿದೆ (ἐγώ εἰμι, *egō eimi*): "*ನಾನೇ* ಆದಿಯೂ ಅಂತವೂ ಆಗಿದ್ದೇನೆ." **ಆದಿಯೂ ಅಂತವೂ** (ಅಲ್ಫಾ ಮತ್ತು ಒಮೆಗಾ) ಎಂಬವುಗಳು ಗ್ರೀಕ್ ಭಾಷೆಯ ಅಕ್ಷರಮಾಲೆಯಲ್ಲಿ ಮೊದಲನೆಯ ಹಾಗೂ ಕಡೇ ಅಕ್ಷರಗಳಾಗಿವೆ: Α Ω. ಇದೇ ಪರಿಭಾಷೆಯು ಪ್ರಕಟನೆ ಪುಸ್ತಕದ ಆರಂಭದಲ್ಲಿ ಬಳಸಲ್ಪಟ್ಟಿರುತ್ತದೆ (1:8; ನೋಡಿರಿ 1:17; 3:14). ಅಲ್ಲಿ, ಕರ್ತನು ರೋಮನ್ ಸಾಮ್ರಾಜ್ಯಕ್ಕೆ ಮುಂಚೆ ಬಹಳ ಕಾಲದಿಂದಲೂ ಅಸ್ತಿತ್ವದಲ್ಲಿದ್ದವನು ಹಾಗೂ ಅದು ಗತಿಸಿ ಹೋಗಿ ಎಷ್ಟೋ ಕಾಲವಾದ ಬಳಿಕವೂ ಆತನು ಇರುವಾತನಾಗಿದ್ದಾನೆ ಎಂಬುದನ್ನು ಒತ್ತಿ ಹೇಳಲಾಗಿತ್ತು (1:8, 18; 3:14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಇಲ್ಲಿ, ಅದು ಕರ್ತನು ಏನನ್ನು ಆರಂಭಿಸುತ್ತಾನೋ, ಅದನ್ನು ಆತನು ಪೂರ್ತಿಗೊಳಿಸುವನು ಎಂಬುದನ್ನು ಒತ್ತಿ ಹೇಳುತ್ತದೆ. ಆತನು ಏನು ವಾಗ್ದಾನ ಮಾಡಿದ್ದನೋ, ಅದನ್ನು ಆತನು ನೆರವೇರಿಸುವನು.[15] ತತ್ಪರಿಣಾಮವಾಗಿ, ದೇವರು ತನ್ನ ವಾಗ್ದಾನಗಳ ಮೇಲೆ ತನ್ನ ಸಹಿಯನ್ನು ಹಾಕಿದನು (ನೋಡಿರಿ 22:13). "ಆದಿಯೂ ಅಂತವೂ" ಎಂಬ ಪದಗುಚ್ಛವು ಬಳಸಲ್ಪಟ್ಟಿರುವ ಮೂರು ಸ್ಥಳಗಳಲ್ಲಿ (1:8; 21:6; 22:13), ಕೆಲವು ಸಾರಿ ಆ ಪದವು ತಂದೆಯನ್ನು ಮತ್ತು ಇನ್ನು ಕೆಲವು ಸಾರಿ ಮಗನನ್ನು ಸೂಚಿಸುವಂತೆ ತೋರುತ್ತದೆ. ಇಬ್ಬರೂ ಬಹಳವಾಗಿ ನಿಕಟವಾಗಿರುವದರಿಂದ, ನಿರ್ದಿಷ್ಟವಾದ ವಾಕ್ಯದಲ್ಲಿ ಪದಗುಚ್ಛವು ಯಾರನ್ನು ಸೂಚಿಸುತ್ತದೆಂಬುದರಲ್ಲಿ ಯಾವದೇ ವ್ಯತ್ಯಾಸವಿರುವದಿಲ್ಲ.

3 ಮತ್ತು 4 ವಚನಗಳಲ್ಲಿ ಕೊಡಲ್ಪಟ್ಟಿರುವ ವಾಗ್ದಾನದೊಂದಿಗೆ ನಿಕಟವಾಗಿ ಸಂಬಂಧವನ್ನು ಹೊಂದಿರುವದೆಂದರೆ 6ನೇ ವಚನದಲ್ಲಿನ ವಾಗ್ದಾನ. ಆತನು ಪರಲೋಕದಲ್ಲಿ *ಪ್ರತಿಯೊಂದು* ಅಗತ್ಯತೆಯನ್ನು ತೃಪ್ತಿ ಪಡಿಸುವೆನೆಂದು ದೇವರು ವಾಗ್ದಾನ ಮಾಡುತ್ತಾನೆ: **ದಾಹವುಳ್ಳವನಿಗೆ ಜೀವಜಲದ ಬುಗ್ಗೆಯಲ್ಲಿ ಕ್ರಯವಿಲ್ಲದೆ ಕುಡಿಯುವದಕ್ಕೆ ಕೊಡುವೆನು.** (ವ. 6ನ್ನು ಯೆಶಾಯ 55:1ರೊಂದಿಗೆ ಹೋಲಿಕೆ ಮಾಡಿರಿ.) ಈ ವಾಗ್ದಾನದ ಬೆಲೆಯನ್ನು ಗ್ರಹಿಸಿಕೊಳ್ಳಬೇಕೆಂದರೆ, ನಾವು ನಮ್ಮನ್ನು ಪ್ರಕಟನೆ ಪುಸ್ತಕದ ಪ್ರಥಮ ವಾಚಕರ ಸ್ಥಾನದಲ್ಲಿ ಇಟ್ಟುಕೊಳ್ಳಬೇಕು: ನೀರು ಅನೇಕ ಸಾರಿ ಅಭಾವದಲ್ಲಿರುತ್ತಿತ್ತು ಮತ್ತು ಅಮೂಲ್ಯವಾದ ಪದಾರ್ಥವಾಗಿತ್ತು. ಆ ದಿನದಲ್ಲಿ, ಮಾನವನ ಆತ್ಮೀಕ ಅಗತ್ಯತೆಗಳನ್ನು ದೇವರು ಅದ್ಭುತವಾಗಿ ಒದಗಿಸಿ ಕೊಡುವಿಕೆಗೆ ಭೂಮಿಯೊಳಗಿಂದ ಮೇಲಕ್ಕೆ ಪುಟಿಯುತ್ತಿರುವ ತಣ್ಣನೆಯ ಹಾಗೂ ತಾಜಾ ನೀರಿನ ಬುಗ್ಗೆಗಿಂತಲೂ ತಕ್ಕದಾದ ದೃಷ್ಟಾಂತವು ಬೇರೊಂದು ಇರಲಿಲ್ಲ.

ಬೈಬಲಿನಲ್ಲಿ, ಬಾಯಾರಿಕೆಯು ನಿರ್ಮಲ, ಉನ್ನತ, ಅತ್ಯುತ್ತಮವಾದದ್ದರ ಕುರಿತಾಗಿ ಮನುಷ್ಯನೊಳಗಿರುವ ಆಳವಾದ ಹಂಬಲಿಕೆಯನ್ನು ಪ್ರತಿನಿಧಿಸುವದಕ್ಕೆ ಬಳಸಲ್ಪಟ್ಟಿರುತ್ತದೆ (ನೋಡಿರಿ ಕೀರ್ತನೆ 36:9; 42:1; 63:1). ಯೇಸುವು ಹೀಗೆ ಹೇಳಿದನು, "ನೀತಿಗೆ ಹಸಿದು ಬಾಯಾರಿದವರು ಧನ್ಯರು; ಅವರಿಗೆ ತೃಪ್ತಿಯಾಗುವದು" (ಮತ್ತಾಯ 5:6). ಆತನು ಜನರ ಬಾಯಾರಿಕೆಯನ್ನು "ಜೀವಕರವಾದ ನೀರಿ"ನಿಂದ ತೃಪ್ತಿಪಡಿಸುವೆನೆಂದು ವಾಗ್ದಾನ ಮಾಡಿದನು (ಯೋಹಾನ 4:10; ನೋಡಿರಿ ಯೋಹಾನ 7:37). ಈ ಜೀವನದಲ್ಲಿ, ಒಬ್ಬ ಕ್ರೈಸ್ತನ ಆತ್ಮೀಕ ಬಾಯಾರಿಕೆಯು ಭಾಗಶಃ ನೀಗಿಸಲ್ಪಡುತ್ತದೆ, ಆದರೆ ಅದು ಮುಂದಿನ ಜೀವಿತದಲ್ಲಿ ಸಂಪೂರ್ಣವಾಗಿ ತೃಪ್ತಿಪಡಿಸಲ್ಪಡುವದು, ಆ ವೇಳೆಯಲ್ಲಿ ಯೇಸುವು ಆತನನ್ನು "ಜೀವಜಲದ

ಒರತೆಗಳ ಬಳಿಗೆ ನಡಿಸುತ್ತಾನೆ" (ಪ್ರಕಟನೆ 7:17). ಬಳಿಕ, ರಕ್ಷಣೆ ಹೊಂದಿದವರು ನದಿಯ ಬದಿಯಲ್ಲಿ ವಾಸಿಸುವರು "ಸ್ಫಟಿಕದಂತೆ ಪ್ರಕಾಶಮಾನವಾಗಿದ್ದ ಜೀವಜಲದ ನದಿಯನ್ನು ... ಅದು ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನದಿಂದ ಹೊರಟು ಪಟ್ಟಣದ ಬೀದಿಯ ಮಧ್ಯದಲ್ಲಿ ಹರಿಯುತ್ತಿತ್ತು" (22:1).

ದೇವರ ಒದಗಿಸುವಿಕೆಗಳು **ಕ್ರಯವಿಲ್ಲದೆ** ಇರುವಂಥವುಗಳೆಂದು ಹೇಳಲಾಗಿರುತ್ತದೆ. Joe Jonesನು ಅಭಿಪ್ರಾಯ ಪಟ್ಟದ್ದೇನೆಂದರೆ, "ಅವುಗಳು ಮಾನವನ ಕಡೆಯಿಂದ 'ಕ್ರಯವಿಲ್ಲದೆ' ಸಿಕ್ಕುತ್ತವೆ ಯಾಕೆಂದರೆ ನಾವು ಅವುಗಳನ್ನು ಎಂದಿಗೂ ಖರೀದಿಸಲಾರೆವು ಅಥವಾ ಅವುಗಳಿಗೆ ಯೋಗ್ಯರಾಗಲಾರೆವು."[16] ಕೆಲವು ಸಂಗತಿಗಳನ್ನು ಅತ್ಯಂಥ ಐಶ್ವರ್ಯವಂತನಿಂದಲೂ ಖರೀದಿಸುವದಕ್ಕೆ ಸಾಧ್ಯವಿರುವದಿಲ್ಲ; ಅವುಗಳಲ್ಲಿ ಪರಲೋಕವೂ ಒಂದಾಗಿದೆ. ದೇವರ ಆಶ್ಚರ್ಯಕರವಾದ ಕೃಪೆಗಾಗಿ ಆತನಿಗೆ ಸ್ತೋತ್ರವಾಗಲಿ!

**ವಚನ 7.** ವಾಕ್ಯಭಾಗವು ಭವಿಷ್ಯವನ್ನು ಎದುರುನೋಡುವಂತೆ ವಾಚಕನ ಮನಸ್ಸಿನಲ್ಲಿ ಕಾರಣವಾಗಿರುತ್ತದೆ, ಆದರೆ ಮುಂದಿನ ವಚನವು ಏಕಾಏಕಿ ಅದನ್ನು ಪುನಃ ವರ್ತಮಾನಕ್ಕೆ ಕರೆದುಕೊಂಡು ಬರುತ್ತದೆ: **ಜಯಹೊಂದುವವನು ಇವುಗಳಿಗೆ ಬಾಧ್ಯನಾಗುವನು; ನಾನು ಅವನಿಗೆ ದೇವರಾಗಿರುವೆನು, ಅವನು ನನಗೆ ಮಗನಾಗಿರುವನು.** ಪವಿತ್ರಾತ್ಮನ ಉದ್ದೇಶವು ಮುಂದಿನ ಜೀವಿತದ ಕುರಿತು ಇದ್ದ ನಿಷ್ಫಲವಾದ ಕುತೂಹಲವನ್ನು ತೃಪ್ತಿಪಡಿಸುವದಾಗಿರಲಿಲ್ಲ, ಆದರೆ ಹೋರಾಡಿ ಸಾಕಾಗಿ ಹೋಗಿದ್ದ ಕ್ರೈಸ್ತರನ್ನು ಪ್ರೋತ್ಸಾಹಿಸುವದಾಗಿತ್ತು.

**ಜಯಹೊಂದುವವನು** ಎಂಬುದನ್ನು "ಜಯಹೊಂದುತ್ತಿರುವನು" ಎಂದು ಅನುವಾದಿಸಬಹುದು. ಪಾಪವನ್ನು ಜಯಿಸುವದು ಜೀವಿತಕಾಲದ ಹೋರಾಟವಾಗಿರುತ್ತದೆ. "ಜಯಹೊಂದುವವನು [ಅಥವಾ ಹೊಂದುವವಳು]" ಎಂಬ ಪದಗುಚ್ಛವು ಪರಿಚಿತವಿರುವಂಥದ್ದು. ಅದು ಏಳು ಸಭೆಗಳಿಗೆ ಬರೆದ ಪತ್ರಗಳಲ್ಲಿ ಪದೇ ಪದೇ ಬಳಸಲ್ಪಟ್ಟಿತ್ತು (2:7, 11, 17, 26; 3:5, 12, 21; 2:7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). 21:7ರಲ್ಲಿ ಅದರ ಬಳಕೆಯಲ್ಲಿ ಇತರ ವಾಗ್ದಾನಗಳು ಅಡಕವಾಗಿರುತ್ತವೆ. ತತ್ಪರಿಣಾವಾಗಿ ಕರ್ತನು ಹೇಳುವದೇನೆಂದರೆ "ನೀವು ಈ ವಾಗ್ದಾನಗಳನ್ನು ಆನಂದಿಸುವದಕ್ಕೆ ಬಯಸುವದಾದರೆ, ನೀವು ಒಬ್ಬ ಜಯಹೊಂದುವವನಾಗಿರಬೇಕು. ನೀವು ಸಾಯಬೇಕಾದರೂ ನಂಬಿಗಸ್ತರಾಗಿರಬೇಕು" (ನೋಡಿರಿ 2:10).

**ಬಾಧ್ಯ** ಎಂಬ ಪದದ "ಅರ್ಥವು ಪಾಲಿನ ಪ್ರಕಾರವಾಗಿ, ವಿಶೇಷವಾಗಿ ಒಂದು ಬಾಧ್ಯತೆಯನ್ನು ಪಡೆದುಕೊಳ್ಳುವೂ" ಎಂದಾಗಿದೆ (ಮತ್ತಾಯ 19:29; ಇಬ್ರಿಯ 1:14; 1 ಪೇತ್ರ 3:9; ಮತ್ತಾಯ 25:34; ಎಫೆಸ 1:14)."[17] **ಇವುಗಳಿಗೆ** ಎಂಬುದು ಪರಲೋಕದ ಆಶೀರ್ವಾದಗಳನ್ನು ಸೂಚಿಸುತ್ತದೆ.

**ನಾನು ಅವನಿಗೆ ದೇವರಾಗಿರುವೆನು, ಅವನು ನನಗೆ ಮಗನಾಗಿರುವನು** ಎಂಬ ವಾಗ್ದಾನವು (ನೋಡಿರಿ 2 ಕೊರಿಂಥ 6:17, 18) ಈಗ ಅನುಭವಿಸುತ್ತಿರುವಂಥ ಆದರೆ ಪರಲೋಕದಲ್ಲಿ ಪರಿಪೂರ್ಣಗೊಳಿಸಲ್ಪಡಲಿರುವ ಆಶೀರ್ವಾದವೊಂದಕ್ಕೆ ಒಂದು ಅತ್ಯುನ್ನತವಾದ ಉದಾಹರಣೆಯಾಗಿರುತ್ತದೆ. ನಂಬಿಕೆ ಹಾಗೂ ದೀಕ್ಷಾಸ್ನಾನದ ಮೂಲಕ, ಜನರು ದೇವರು ಕುಮಾರರು ಹಾಗೂ ಕುಮಾರ್ತೆಯರು ಆಗುತ್ತಾರೆ (ಗಲಾತ್ಯ 3:26, 27; 4:7). ಯೋಹಾನನು ಹೀಗೆ ಬರೆದನು, "ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ; ನಾವು ಆತನ ಮಕ್ಕಳಾಗಿದ್ದೇವೆ" (1 ಯೋಹಾನ 3:1). ಕ್ರೈಸ್ತರು ಈಗ ಕರ್ತನೊಂದಿಗೆ ಒಂದು ವಿಶೇಷವಾದ

ಸಂಬಂಧವನ್ನು ಅನುಭವಿಸುತ್ತಾರೆ, ಮತ್ತು ಅವರಿಗೆ ಆತನ ಸಾಮಿಪ್ಯತೆ ಹಾಗೂ ಪ್ರೀತಿಯ ಪ್ರಜ್ಞೆಯು ಇರುತ್ತದೆ. ಆದರೆ ಆಗ - ರಕ್ಷಣೆ ಹೊಂದಿದವರಾಗಿ ದೇವರ ಸಮ್ಮುಖದಲ್ಲಿ ನಿಂತಿಕೊಂಡಿರುವಾಗ, ಆತನ ಪ್ರೀತಿಯು ಅವರನ್ನು ಸುತ್ತವರೆದು ಅತ್ಯಧಿಕವಾಗಿ ಆವರಿಸಿಕೊಳ್ಳುವದು - *ಆಗ* ಅವರು ಆತನ ಮಕ್ಕಳಾಗಿರುವದೆಂದರೆ ಏನೆಂಬುದನ್ನು ನಿಜವಾಗಿಯೂ ಅರ್ಥಮಾಡಿಕೊಳ್ಳುವರು.

**ವಚನ 8.** ಜಯಹೊಂದುವದರ ಬದಲಾಗಿ, ಒಬ್ಬನು ಸೋಲಿಸಲ್ಪಟ್ಟವನಾದರೆ - ತಪ್ಪು ಬೋಧನೆಯಿಂದ, ಶೋಧನೆಯಿಂದ, ಅಥವಾ ಬೆದರಿಸುವಿಕೆಯಿಂದ - ಏನಾಗುವದು? ಅಪನಂಬಿಗಸ್ತರ ಗಮ್ಯತೆಯ ಕುರಿತಾಗಿ 8ನೇ ವಚನದಲ್ಲಿ ಬರೆಯಲ್ಪಟ್ಟಿರುತ್ತದೆ: **ಆದರೆ ಹೇಡಿಗಳು, ನಂಬಿಕೆಯಿಲ್ಲದವರು, ಅಸಹ್ಯವಾದದ್ದರಲ್ಲಿ ಸೇರಿದವರು, ಕೊಲೆಗಾರರು, ಜಾರರು, ಮಾಟಗಾರರು, ವಿಗ್ರಹಾರಾಧಕರು, ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೆಯ ಮರಣವು.**

ಈ ವಚನದ ಒಂದು ಭಾಗವು ತಾವು ಕರ್ತನಿಗೆ ನಿಷ್ಠೆಯಿಂದ ಇರಬೇಕೋ ಅಥವಾ ಬೇಡವೋ ಎಂದು ನಿರ್ಧರಿಸಿಕೊಳ್ಳಬೇಕಾಗಿದ್ದ ಪ್ರಥಮ ಶತಮಾನದ ವಾಚಕರಿಗೆ ವಿಶೇಷ ಅನ್ವಯಿಕೆಯನ್ನು ಹೊಂದಿತ್ತು: **ಹೇಡಿಗಳು** (δειλοῖς, *deilois*) ಯಾರೆಂದರೆ ಹಿಂಸೆಯ ಭಯವು ತಮ್ಮ ಮೇಲೆ ಮೇಲುಗೈ ಸಾಧಿಸುವಂತೆ ಅವಕಾಶ ಕೊಟ್ಟವರೇ (ನೋಡಿರಿ 2:10). KJV *deilois* ಎಂಬ ಪದಕ್ಕೆ "ಭಯಭರಿತರಾಗಿರುವವರು" ಎಂದು ಅನುವಾದ ನೀಡುತ್ತದೆ, ಅದು ಒಂದು ತಪ್ಪಾದ ಅನಿಸಿಕೆಯನ್ನುಂಟು ಮಾಡಬಹುದಾಗಿದೆ. ಈ ಪದವು ಒಂದು ಸ್ವಭಾವಿಕವಾದ ಅಂಜುಬುರುಕತನವನ್ನು ಕುರಿತು ಮಾತಾಡುತ್ತಿಲ್ಲ, ಆದರೆ ಯಾವದು ಸರಿಯೋ ಅದನ್ನು ಮಾಡುವದರಿಂದ ಜನರನ್ನು ದೂರವಿರುವಂತೆ ಮಾಡುವಂಥ ಒಂದು ಅಡಗಿಸಿ ಬಿಡುವಂಥ ಭಯವನ್ನು ಕುರಿತು ಮಾತಾಡುತ್ತಿದೆ. ಭಯವಿರುತ್ತದೆ ಆದರೆ *ಆಗಲೂ* ತಾವು ಮಾಡತಕ್ಕದ್ದನ್ನು ಮಾಡುವವರಲ್ಲಿ ಅತ್ಯಂಥ ಉನ್ನತವಾದ ಎದೆಗಾರಿಕೆಯು ಕಂಡು ಬರುತ್ತದೆ. ***ನಂಬಿಕೆಯಿಲ್ಲದವರು*** ಎಂಬುದು ಅವರನ್ನು ಬೀಳುವದರಿಂದ ತಡೆಯುವಷ್ಟು ಬಲವಾಗಿಲ್ಲದ ನಂಬಿಕೆಯನ್ನು ಹೊಂದಿದ್ದವರನ್ನು ಸೂಚಿಸುತ್ತದೆ (14:12).

***ಅಸಹ್ಯವಾದದ್ದಲ್ಲಿ ಸೇರಿದವರು*** ಎಂದರೆ ಮಹಾ ಬಾಬೆಲೆಂಬ ನಗರಿಯ "ಅಹಸ್ಯವಾದವುಗಳಲ್ಲಿ" (17:4, 5) ಭಾಗವಹಿಸಿದವರು ಆಗಿದ್ದರು. ಬೈಬಲಿನಲ್ಲಿ ಬಳಸಲಾಗಿರುವ "ಅಸಹ್ಯವಾದವುಗಳು" ಎಂಬ ಪದವು, ಸಾಮಾನ್ಯವಾಗಿ ವಿಗ್ರಹಾರಾಧನೆಗೆ ಸಂಬಂಧಿಸಿದ ಹೇಸಿಗೆಕರವಾದ ಆಚಾರಗಳನ್ನು ಸೂಚಿಸುತ್ತದೆ (17:4, 5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ***ಕೊಲೆಗಾರರು*** ಎಂಬದರಲ್ಲಿ ನಂಬಿಗಸ್ತರ ಕ್ರೈಸ್ತರ ಮರಣಗಳಲ್ಲಿ ಕೊಡುಗೆಯನ್ನು ನೀಡಿದ್ದವರು ಸೇರಿದ್ದರು (16:6; 17:6; 18:24). ಬೇರೆ ಕ್ರೈಸ್ತರ ಹೆಸರುಗಳನ್ನು ತಿಳಿಯಪಡಿಸಬೇಕೆಂದು ಕ್ರೈಸ್ತರಿಗೆ ಒತ್ತಾಯ ಪಡಿಸಲಾಗುತ್ತಿತ್ತು. ದುಃಖಕರವಾಗಿ, ಆದಿ ಕ್ರೈಸ್ತ ಬರಹಗಾರರ ಪ್ರಕಾರವಾಗಿ, ಕೆಲವರು ಒತ್ತಡಕ್ಕೆ ಮಣಿದು ಹೋಗಿದ್ದರು. ಜಾರತ್ವ ಹಾಗೂ ಮಾಟಗಳು ವಿಗ್ರಹಾರಾಧನೆಗೆ ಸಂಬಂಧ ಹೊಂದಿದ್ದವು (9:21ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಮತ್ತು ವಿಶೇಷವಾಗಿ ಕೈಸರನ ವಿಗ್ರಹದ ಮುಂದೆ ನಮಸ್ಕರಿಸಿದವರಿಗೆ ಅನ್ವಯಿಸಲ್ಪಡುತ್ತಿತ್ತು (2:14, 20, 21; 9:21; 14:8). **ಸುಳ್ಳುಗಾರರು** ಎಂಬುದು ಯೇಸುವು ದೇವರ ಕುಮಾರನು ಎಂಬುದನ್ನು ನಿರಾಕರಿಸಿದವರಿಗೆ ದೇವರು ಬಳಸಿದ ಕಟುವಾದ ಗುಣವಾಚಕವಾಗಿತ್ತು (ನೋಡಿರಿ 14:5).

ಸಭೆಯ ಆದಿ ಶತಮಾನಗಳಿಗೆ ಈ ವಿಧವಾದ ನಿರ್ದಿಷ್ಟವಾದ ಅನ್ವಯಿಕೆಗಳ ಜೊತೆಯಲ್ಲಿ,

ಈ ಪಾಪಗಳು ಸಭೆಯನ್ನು ಈ ದಿನವೂ ಪೀಡಿಸುತ್ತಲೇ ಇರುವದರಿಂದ ಒಂದು ಸಾಮಾನ್ಯವಾದ ಅನ್ವಯಿಕೆಯನ್ನು ಮಾಡಬಹುದಾಗಿದೆ. ಕ್ರೈಸ್ತರು ಅಂತಹ ಪಾಪಗಳ ವಿರುದ್ಧವಾಗಿ ತಮ್ಮನ್ನು ಎಚ್ಚರದಿಂದ ಕಾಪಾಡಿಕೊಳ್ಳುವ ಅಗತ್ಯವಿರುತ್ತದೆ.

## ಮದಲಗಿತ್ತಿಯಾದ ಯೆರೂಸಲೇಮ್ (21:9-14)

**[9]ಕಡೇ ಏಳು ಉಪದ್ರವಗಳಿಂದ ತುಂಬಿದ ಏಳು ಪಾತ್ರೆಗಳನ್ನು ಹಿಡಿದಿದ್ದ ಏಳು ಮಂದಿ
ದೇವದೂತರಲ್ಲಿ ಒಬ್ಬನು ಬಂದು ನನ್ನ ಸಂಗಡ ಮಾತಾಡುತ್ತಾ - ಬಾ, ಯಜ್ಞದ
ಕುರಿಯಾದಾತನಿಗೆ ಹೆಂಡತಿಯಾಗತಕ್ಕ ಮದಲಗಿತ್ತಿಯನ್ನು ನಿನಗೆ ತೋರಿಸುವೆನು ಎಂದು
ಹೇಳಿ [10-11]ದೇವರಾತ್ಮವಶನಾದ ನನ್ನನ್ನು ಎತ್ತರವಾದ ದೊಡ್ಡ ಬೆಟ್ಟಕ್ಕೆ ಎತ್ತಿಕೊಂಡು ಹೋಗಿ
ಯೆರೂಸಲೇಮೆಂಬ ಪರಿಶುದ್ಧ ಪಟ್ಟಣವು ದೇವರ ತೇಜಸ್ಸುಳ್ಳದ್ದಾಗಿ ಪರಲೋಕದೊಳಗಿಂದ
ದೇವರ ಕಡೆಯಿಂದ ಇಳಿದುಬರುವದನ್ನು ನನಗೆ ತೋರಿಸಿದನು. ಪಟ್ಟಣದ ಪ್ರಕಾಶವು
ಅಮೂಲ್ಯರತ್ನದ ಪ್ರಕಾಶಕ್ಕೆ ಸಮಾನವಾಗಿತ್ತು, ಥಳಥಳಿಸುವ ವಜ್ರವೋ ಎಂಬಂತೆ ಕಾಣಿಸಿತು.
[12]ಆ ಪಟ್ಟಣಕ್ಕೆ ಎತ್ತರವಾದ ದೊಡ್ಡ ಪ್ರಾಕಾರವಿತ್ತು; ಅದಕ್ಕೆ ಹನ್ನೆರಡು ಹೆಬ್ಬಾಗಿಲುಗಳಿದ್ದವು; ಆ
ಬಾಗಿಲುಗಳ ಬಳಿಯಲ್ಲಿ ಹನ್ನೆರಡು ಮಂದಿ ದೇವದೂತರಿದ್ದರು; ಅವುಗಳ ಮೇಲೆ ಇಸ್ರಾಯೇಲ್ಯರ
ಹನ್ನೆರಡು ಕುಲಗಳ ಹೆಸರುಗಳು ಬರೆದಿದ್ದವು. [13]ಪೂರ್ವದಿಕ್ಕಿನಲ್ಲಿ ಮೂರು ಬಾಗಿಲುಗಳು,
ಉತ್ತರದಿಕ್ಕಿನಲ್ಲಿ ಮೂರು ಬಾಗಿಲುಗಳು, ದಕ್ಷಿಣದಿಕ್ಕಿನಲ್ಲಿ ಮೂರು ಬಾಗಿಲುಗಳು,
ಪಶ್ಚಿಮದಿಕ್ಕಿನಲ್ಲಿ ಮೂರು ಬಾಗಿಲುಗಳು ಇದ್ದವು. [14]ಪಟ್ಟಣದ ಪ್ರಾಕಾರಕ್ಕೆ ಹನ್ನೆರಡು
ಅಸ್ತಿವಾರಗಳಿದ್ದವು; ಅವುಗಳ ಮೇಲೆ ಯಜ್ಞದ ಕುರಿಯಾದಾತನ ಹನ್ನೆರಡು ಮಂದಿ ಅಪೊಸ್ತಲರ
ಹೆಸರುಗಳಿದ್ದವು.**

ಮನೆ - ಎಂಥ ಸುಂದರವಾದ ಜಗತ್ತು! ಯಾರೋ ಒಬ್ಬರು "ಮನೆ ಎಲ್ಲೋ ಹೃದಯವು ಅಲ್ಲಿಯೇ" ಎಂದು ಹೇಳಿದ್ದಾರೆ. Oliver Wendell Holmesನು ಹೇಳಿದ್ದೇನೆಂದರೆ ಮನೆಯು "ನಾವು ಪ್ರೀತಿಸುವ ಸ್ಥಳವೇ," "ನಮ್ಮ ಪಾದಗಳು ಅಲ್ಲಿಂದ ಬಿಟ್ಟು ಹೋಗಬಹುದು, ಆದರೆ ನಮ್ಮ ಹೃದಯವು ಅಲ್ಲಿಂದ ಹೊರಡುವದಿಲ್ಲ."[18] John Howard Payneನು ಹೀಗೆ ಬರೆದನು, "ನಾವು ವಿಲಾಸಗಳ ಹಾಗೂ ಅರಮನೆಗಳ ಮಧ್ಯ ತಿರುಗಾಡಬಹುದು, ಅದು ಎಂದೆಂದೂ ಅಷ್ಟೊಂದು ದೀನವಾಗಿದ್ದರೂ ಸರಿಯೇ, ಮನೆಯಂಥ ಸ್ಥಳವು ಬೇರೊಂದಿಲ್ಲ."[19] ಭೂಲೋಕದ ಮನೆಗಳು ಅಷ್ಟೊಂದು ಅದ್ಭುತವಾಗಿದ್ದರೂ, ನಾವು ಈಗಲೂ ಮೇಲಿನ ಮನೆಗಾಗಿ ಒಂದು ಹಂಬಲಿಕೆಯನ್ನು ಹೊಂದಿದ್ದೇವೆ. ಪೌಲನು ಕರೆದಂತಹ ಆ "ಕರ್ತನ ಜೊತೆಯಲ್ಲಿರುವದೇ" (2 ಕೊರಿಂಥ 5:8) ಎಂಬುದನ್ನು ಅನುಭವಿಸುವದಕ್ಕೆ ಬಯಸುತ್ತೇವೆ - ಜ್ಞಾನಿಯು "ನಿತ್ಯ ಗೃಹ" (ಪ್ರಸಂಗಿ 12:5) ಕರೆದ ಆ ಸ್ಥಳದಲ್ಲಿರುವದಕ್ಕೆ ಬಯಸುತ್ತೇವೆ. ಈ ವಿಭಾಗ ಹಾಗೂ ಮುಂದಿನ ವಿಭಾಗದ ಒತ್ತು ನಮ್ಮ ಮನೆಯು ಎಷ್ಟು ಸುಂದರವಾಗಿದೆ ಎಂಬುದರ ಮೇಲಿರುತ್ತದೆ.

**ವಚನ 9.** ವಾಕ್ಯಭಾಗವು ಹೀಗೆ ಆರಂಭಗೊಳ್ಳುತ್ತದೆ, **ಕಡೇ ಏಳು ಉಪದ್ರವಗಳಿಂದ ತುಂಬಿದ ಏಳು ಪಾತ್ರೆಗಳನ್ನು ಹಿಡಿದಿದ್ದ ಏಳು ಮಂದಿ ದೇವದೂತರಲ್ಲಿ ಒಬ್ಬನು ಬಂದು ನನ್ನ ಸಂಗಡ ಮಾತಾಡುತ್ತಾ - ಬಾ, ಯಜ್ಞದ ಕುರಿಯಾದಾತನಿಗೆ ಹೆಂಡತಿಯಾಗತಕ್ಕ ಮದಲಗಿತ್ತಿಯನ್ನು ನಿನಗೆ ತೋರಿಸುವೆನು ಎಂದು ಹೇಳಿ.** ಸಭೆಯು **ಯಜ್ಞದ ಕುರಿಯಾದಾತನ ಮದಲಗಿತ್ತಿ** ಆಗಿರುತ್ತಾಳೆ (ನೋಡಿರಿ ಎಫೆಸ 5:22–32). "ಮದಲಗಿತ್ತಿ" ಎಂಬ ಪದವು ಪರಲೋಕದಲ್ಲಿ ಮಹಿಮಕರಣಗೊಂಡಿರುವ ಸಭೆಯನ್ನು ಸೂಚಿಸುತ್ತದೆಂಬುದಾಗಿ ಈ ಮುಂಚೆ

ಅಭಿಪ್ರಾಯ ಪಡಲಾಗಿತ್ತು (ವ. 2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಮತ್ತೊಂದಾವರ್ತಿ, ಜನರು (ಸಭೆ) ಮತ್ತು ಸ್ಥಳ (ಪರಲೋಕ) ನಡುವೆ ಭಿನ್ನತೆಯನ್ನು ಗುರುತಿಸುವದು ಕಷ್ಟಕರವಾಗಿರುತ್ತದೆ: ದೇವದೂತನು ಯೋಹಾನನಿಗೆ *ಮದಲಗಿತ್ತಿ*ಯನ್ನು (ವ. 9) ತೋರಿಸುವೆನೆಂದು ಹೇಳುತ್ತಾನೆ, ಆದರೆ ಆತನಿಗೆ *ಪಟ್ಟಣ*ವನ್ನು ತೋರಿಸಿದನು (ವ. 10).

ಈ ಸಂದರ್ಭಕ್ಕಾಗಿ ಆರಿಸಿಕೊಳ್ಳಲ್ಪಟ್ಟಿರುವ ಸಂದೇಶಕನು ಒಂದು ರೀತಿಯಲ್ಲಿ ಅಚ್ಚರಿಯಾಗಿರುತ್ತದೆ: ರೌದ್ರದ ಪಾತ್ರೆಗಳನ್ನು ಸುರಿಸಿದ್ದ **ದೇವದೂತರಲ್ಲಿ** ಒಬ್ಬನಾಗಿದ್ದನು. ಆ ಪಾತ್ರೆಗಳು ಪ್ರತೀಕಾರ ಹಾಗೂ ನಿರೀಕ್ಷೆರಹಿತತೆಗಳೊಂದಿಗೆ ಸಂಬಂಧ ಪಟ್ಟಿದ್ದವು, ಆದರೆ ಪ್ರಕಟನೆ 21:9ರ ನಂತರ ಬರುವ ದರ್ಶನವು ಜಯ ಹಾಗೂ ನಿರೀಕ್ಷೆಯ ದರ್ಶನವಾಗಿದೆ. ಬಹುಶಃ ನಾವು ಹಳೆಯ, "ಮಹಾ" ಬಾಬೆಲ, ಮತ್ತು ಹೊಸದಾದ, ಪರಿಶುದ್ಧ ಯೆರೂಸಲೇಮ ನಡುವಿನ ವಿರುದ್ಧ ಹೋಲಿಕೆಯನ್ನು ಕಾಣುವಂತಾಗಬೇಕೆಂದು ಈ ದೇವದೂತನನ್ನು ಆರಿಸಿಕೊಂಡಿರಬಹುದಾಗಿದೆ. 17:1ರಲ್ಲಿ ರೌದ್ರದಿಂದ ತುಂಬಿದ್ದ ಪಾತ್ರೆಗಳನ್ನು ಹಿಡಿದಿದ್ದ ದೇವದೂತರೊಳಗೆ ಒಬ್ಬನು ಯೋಹಾನನಿಗೆ ಹೀಗೆ ಹೇಳಿದ್ದನು, "ಬಾ, ಬಹಳ ನೀರುಗಳ ಮೇಲೆ ವಾಸಿಸಿರುವ ಮಹಾ ಜಾರಸ್ತ್ರೀಗೆ ಬರುವ ದಂಡನೆಯನ್ನು ನಿನಗೆ ತೋರಿಸುತ್ತೇನೆ." ಈಗ, ಆ ಏಳು ದೇವದೂತರಲ್ಲಿ ಒಬ್ಬನು, ಬಹುಶಃ ಅದೇ ದೇವದೂತನೇ, ಹೀಗೆ ಹೇಳುತ್ತಾನೆ, "ಬಾ, ಯಜ್ಞದ ಕುರಿಯಾದಾತನಿಗೆ ಹೆಂಡತಿಯಾಗತಕ್ಕ ಮದಲಗಿತ್ತಿಯನ್ನು ನಿನಗೆ ತೋರಿಸುವೆನು."

**ವಚನ 10.** ಬಹಳ ಕಾಲದ ಹಿಂದೆ, ಮೋಶೆಯು ಕಾನಾನ್ ದೇಶವನ್ನು ನೋಡುವದಕಕ್ಕಾಗಿ ಪಿಸ್ಗಾ ಪರ್ವತದ ಮೇಲೆ ನಿಂತುಕೊಳ್ಳುವದಕ್ಕೆ ಅನುಮತಿಸಲ್ಪಟ್ಟಿದ್ದನು (ಧರ್ಮೋಪದೇಶಕಾಂಡ 3:27; 34:1). ಅದೇ ರೀತಿಯಲ್ಲಿಯೇ, ದೇವದೂತನು **ದೇವರಾತ್ಮವಶನಾದ** ಯೋಹಾನನನ್ನು **ಎತ್ತರವಾದ ದೊಡ್ಡ ಬೆಟ್ಟಕ್ಕೆ ಎತ್ತಿಕೊಂಡು ಹೋಗಿ ಯೆರೂಸಲೇಮೆಂಬ ಪರಿಶುದ್ಧ ಪಟ್ಟಣವು ದೇವರ ತೇಜಸ್ಸುಳ್ಳದ್ದಾಗಿ ಪರಲೋಕದೊಳಗಿಂದ ದೇವರ ಕಡೆಯಿಂದ ಇಳಿದುಬರುವದನ್ನು ನನಗೆ ತೋರಿಸಿದನು. ಎತ್ತಿಕೊಂಡು ಹೋಗಿ** ಎಂಬ ಪದವು ಯೋಹಾನನ್ನು ಶಾರೀರಿಕವಾಗಿ ಹೊತ್ತುಕೊಂಡು ಹೋಗಲಾಯಿತೆಂಬುದನ್ನು ಸೂಚಿಸುವದಿಲ್ಲ, ಆದರೆ ಬದಲಾಗಿ ಆತನ ಆತ್ಮವು ಪರಿಶುದ್ಧಾತ್ಮನ ಅಧೀನಕ್ಕೊಳಗಾಗಿತ್ತು ಎಂಬದನ್ನು ಸೂಚಿಸುತ್ತದೆ (1:10; 4:2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). (ಈ ಘಟನೆಯನ್ನು ಯೆಹೆಜ್ಕೇಲ 40:2ರಲ್ಲಿ ಬಣ್ಣಿಸಿರುವ ಘಟನೆಯೊಂದಿಗೆ ಹೋಲಿಕೆ ಮಾಡಿರಿ.) ಯೋಹಾನನನ್ನು ಮಹಾ ಬಾಬೆಲನ್ನು ನೋಡುವದಕ್ಕಾಗಿ *ಅರಣ್ಯ*ವೊಂದಕ್ಕೆ ಎತ್ತಿಕೊಂಡು ಹೋಗಲಾಗಿತ್ತು (17:1–3), ಆದರೆ ಈಗ ಆತನನ್ನು ಹೊಸ ಯೆರೂಸಲೇಮನ್ನು ನೋಡುವದಕ್ಕಾಗಿ ಒಂದು *ಬೆಟ್ಟಕ್ಕೆ* ಎತ್ತಕೊಂಡು ಹೋಗಲಾಗಿತ್ತು. **ಯೆರೂಸಲೇಮೆಂಬ ಪರಿಶುದ್ಧ ಪಟ್ಟಣವು ... ಪರಲೋಕದೊಳಗಿಂದ ... ಇಳಿದುಬರುವದನ್ನು** ಕಂಡಿದ್ದು ಎರಡನೆಯ ಪಟ್ಟಣವೊಂದು ಇಳಿದು ಬರುವದಾಗಲಿ, ಅಥವಾ ಅದೇ ಪಟ್ಟಣವು ಎರಡನೆಯ ಸಾರಿ ಇಳಿದು ಬರುವದಾಗಲಿ ಆಗಿರುವದಿಲ್ಲ, ಆದರೆ 21:2ರಲ್ಲಿ ಮಾತಾಡಲ್ಪಟ್ಟ ಅದೇ ಘಟನೆ ಆಗಿರುತ್ತದೆ (ವ. 2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪ್ರಕಟನೆ ಪುಸ್ತಕವು ಅನೇಕ ಸಾರಿ ಒಂದೇ ಘಟನೆಯ ಕುರಿತಾಗಿ ಒಂದಕ್ಕಿಂತ ಹೆಚ್ಚು ಬಾರಿ ಮಾತಾಡುತ್ತದೆ. (14:8ನ್ನು 18:2ರೊಂದಿಗೆ; ಮತ್ತು 9:20ನ್ನು 16:9ರೊಂದಿಗೆ ಹೋಲಿಕೆ ಮಾಡಿರಿ.)

**ವಚನ 11.** ಹೊಸ ಯೆರೂಸಲೇಮ **ದೇವರ ತೇಜಸ್ಸುಳ್ಳದ್ದಾಗಿ** ಇತ್ತು. ಇಳಿದು ಬರುತ್ತಿದ್ದ ಪಟ್ಟಣವು ಅಮೂಲ್ಯವಾದ ಮುತ್ತಿನಂತೆ ಹೊಳೆಯುತ್ತಿತ್ತು: **ಪಟ್ಟಣದ ಪ್ರಕಾಶವು**

**ಅಮೂಲ್ಯರತ್ನದ ಪ್ರಕಾಶಕ್ಕೆ ಸಮಾನವಾಗಿತ್ತು, ಥಳಥಳಿಸುವ ವಜ್ರವೋ ಎಂಬಂತೆ ಕಾಣಿಸಿತು.** ಸಿಂಹಾಸನದ ದೃಶ್ಯದಲ್ಲಿ, ದೇವರು "ಸೂರ್ಯಕಾಂತ ಪದ್ಮರಾಗ ಮಣಿಗಳಂತೆ ಕಾಣುತ್ತಿದ್ದನು" ಎಂದು ಬಣ್ಣಿಸಲ್ಪಟ್ಟಿರುತ್ತಾನೆ (4:3). ಇಲ್ಲಿ, ಸೃಷ್ಟಿಯು ಸೃಷ್ಟಿಸಲ್ಪಟ್ಟವನ ಗುಣವನ್ನು ಧರಿಸಿಕೊಂಡಿರುತ್ತದೆಂಬುದನ್ನು ನೋಡುತ್ತೇವೆ. ಅದು ಸಹ, "ಅಮೂಲ್ಯರತ್ನದ" ಹೊಳುಪನ್ನು ಹೊಂದಿತ್ತು. ಇದನ್ನು ಒಂದು ಥಳಥಳಿಸುವಂಥ, ಮುಗಿಲುಬಿಲ್ಲಿನ ಬಣ್ಣಗಳನ್ನು ಪ್ರತಿಬಿಂಬಿಸುತ್ತಿರುವ ವಜ್ರಕ್ಕೆ ಹೋಲಿಕೆ ಮಾಡಬಹುದು (4:3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನ 12.** ಯೋಹಾನನ ಗಮನವು ಪಟ್ಟಣದ ಗೋಡೆಗಳ ಕಡೆಗೆ ತಿರುಗಿಕೊಂಡಿತ್ತು. ಪ್ರಥಮ ಶತಮಾನದಲ್ಲಿ, ಪ್ರತಿಯೊಂದು ಮಹಾ ನಗರಕ್ಕೂ ಭದ್ರತೆಯ ಗೋಡೆಗಳನ್ನು ನಿರ್ಮಿಸಲಾಗಿರುತ್ತಿತ್ತು. ಅದೇ ರೀತಿಯಲ್ಲಿಯೇ, ಪರಲೋಕದ ಪಟ್ಟಣಕ್ಕೆ **ಎತ್ತರವಾದ ದೊಡ್ಡ ಪ್ರಾಕಾರವಿತ್ತು.** ಈ ಗೋಡೆಗೆ **ಹನ್ನೆರಡು ಹೆಬ್ಬಾಗಿಲುಗಳಿದ್ದವು; ಆ ಬಾಗಿಲುಗಳ ಬಳಿಯಲ್ಲಿ ಹನ್ನೆರಡು ಮಂದಿ ದೇವದೂತರು ಇದ್ದರು.** ಅಯೋಗ್ಯವಾದರು ಪ್ರವೇಶಿಸದಂತೆ ಕಾವಲು ಕಾಯುವದಕ್ಕಾಗಿ ದೇವದೂತರನ್ನು ಅಲ್ಲಿ ನೇಮಿಸಲಾಗಿತ್ತೋ? ಬಹುಶಃ ಹಾಗೆಯೇ ಇದ್ದಿರಬಹುದಾಗಿದೆ (21:27; 22:15). ಇನ್ನೊಂದು ಕಡೆಯಲ್ಲಿ, ದೇವದೂತರ ಕುರಿತಾಗಿ "ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ ಸೇವೆಗೋಸ್ಕರ ಕಳುಹಿಸಲ್ಪಡುವ ಊಳಿಗದ ಆತ್ಮಗಳು" ಎಂದು ಕರೆಯಲ್ಪಟ್ಟಿದ್ದಾರೆ (ಇಬ್ರಿಯ 1:14). ಆತ್ಮಗಳು ರಕ್ಷಣೆ ಹೊಂದುವಾಗ ದೇವದೂತರು ಸಂತೋಷ ಪಡುತ್ತಾರೆ (ಲೂಕ 15:7, 10), ಮತ್ತು ದೇವದೂತರು ಲಾಜರನ್ನು ಎತ್ತಿಕೊಂಡು ಹೋಗಿ ಅಬ್ರಹಾಮನ ಎದೆಗೆ ಒರಗಿಸಿದರು (ಲೂಕ 16:22). ಆದದರಿಂದ, ನಾವು ಈ ದೇವದೂತರು "ಭಲೇ ... ಸೇರು" (ಮತ್ತಾಯ 25:23) ಎಂದು ಹೇಳಲ್ಪಡುವವರನ್ನು ಸ್ವಾಗತಿಸುವದಕ್ಕೆ ಇರುವ ಕರ್ತನ ಅಧಿಕಾರಿಗಳೆಂಬುದಾಗಿ ಯೋಚಿಸುವದು ಸೂಕ್ತವಾಗಿರಬಹುದು.

ಹನ್ನೆರಡು ಹೆಬ್ಬಾಗಿಲುಗಳ **ಮೇಲೆ ಇಸ್ರಾಯೇಲ್ಯರ ಹನ್ನೆರಡು ಕುಲಗಳ ಹೆಸರುಗಳು ಬರೆದಿದ್ದವು.** (ಯೆಹೆಜ್ಕೇಲ 48:30-35ರಲ್ಲಿ ಇರುವ ಬಾಗಿಲುಗಳ ಬಣ್ಣನೆಗಳನ್ನು ನೋಡಿರಿ.) ಈ **ಹನ್ನೆರಡು ಕುಲಗಳು** ಎಂಬ ಪದದ ಅರ್ಥವು *ಎಲ್ಲಾ* ಇಸ್ರಾಯೇಲ್ಯರು ಎಂದಾಗಿತ್ತು. ಪ್ರಕಟನೆ ಪುಸ್ತಕದಲ್ಲಿ "ಹನ್ನೆರಡು ಕುಲಗಳು" ಎಂಬುದು ಆತ್ಮೀಕ ಇಸ್ರಾಯೇಲಿಗೆ, ಅಂದರೆ ಸಭೆಗೆ ಒಂದು ಸಂಕೇತವಾಗಿ ಬಳಸಲಾಗಿದೆಯಾದ್ದರಿಂದ (7:4-8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಮತ್ತು ಪ್ರಕಟನೆ ಪುಸ್ತಕದ ನಿರ್ದಿಷ್ಟವಾದ ಉದ್ದೇಶವು ಸಭೆಯ ಕಂಗೆಟ್ಟಿದ್ದ ಸದಸ್ಯರನ್ನು ಪ್ರೋತ್ಸಾಹಿಸುವದಾಗಿತ್ತಾದ್ದರಿಂದ, ಈ ಪದವು ಬಹುಶಃ ಕ್ರೈಸ್ತರನ್ನು ಸೂಚಿಸುತ್ತಿರಬಹುದಾಗಿದೆ. ಹೇಗೂ, *ಎಲ್ಲಾ* ಯುಗಗಳಲ್ಲಿನ ನಂಬಿಗಸ್ತರು ಪರಲೋಕದಲ್ಲಿರುವರು ಎಂಬುದಕ್ಕೆ ಒಂದು ದೃಢೀಕರಣವೆಂಬುದಾಗಿ ಈ ಸಾಂಕೇತಿಕತೆಯನ್ನು ಕಾಣುವದು ಸಾಧ್ಯವಿರುತ್ತದೆ (ನೋಡಿರಿ 11:39, 40).

**ವಚನ 13.** ಯೋಹಾನನು ಗೋಡೆಯಲ್ಲಿರುವ ಬಾಗಿಲುಗಳನ್ನು ಸಹ ಬಣ್ಣಿಸಿದನು, ಶಾರೀರಿಕ ಯೆರೂಸಲೇಮಿಗೆ ಹಲವಾರು ಬಾಗಿಲುಗಳಿದ್ದವು (ನೋಡಿರಿ ನೆಹಮೀಯ 2:3, 13-15; 12:37, 39). ಹೊಸ ಯೆರೂಸಲೇಮಿಗೆ ಒಟ್ಟು "ಹನ್ನೆರಡು ಹೆಬ್ಬಾಗಿಲುಗಳಿದ್ದವು" (ಪ್ರಕಟನೆ 21:12): **ಪೂರ್ವದಿಕ್ಕಿನಲ್ಲಿ ಮೂರು ಬಾಗಿಲುಗಳು, ಉತ್ತರದಿಕ್ಕಿನಲ್ಲಿ ಮೂರು ಬಾಗಿಲುಗಳು, ದಕ್ಷಿಣದಿಕ್ಕಿನಲ್ಲಿ ಮೂರು ಬಾಗಿಲುಗಳು, ಪಶ್ಚಿಮದಿಕ್ಕಿನಲ್ಲಿ ಮೂರು ಬಾಗಿಲುಗಳು ಇದ್ದವು.** ಹನ್ನೆರಡು ಬಾಗಿಲುಗಳನ್ನು ಹೊಂದಿದ್ದ ಉದ್ದೇಶವು "ಪರಲೋಕಕ್ಕೆ ಹೋಗಲು ಅನೇಕ

ದಾರಿಗಳಿವೆ" ಎಂಬುದನ್ನು ಸೂಚಿಸುವದು ಆಗಿರಲಿಲ್ಲ; ಯೇಸುವು ತಾನೊಬ್ಬನೇ "ಮಾರ್ಗ ಆಗಿದ್ದೇನೆ" ಎಂದು ಹೇಳಿದನು (ಯೋಹಾನ 14:6; ಒತ್ತಿ ಹೇಳಿದ್ದು ನನ್ನದು). ಬದಲಾಗಿ, "ಹನ್ನೆರಡು" ಸಂಖ್ಯೆಯು ಪುನಃ ಪರಿಪೂರ್ಣತೆಯನ್ನು ಸೂಚಿಸುತ್ತದೆ: ತಮ್ಮನ್ನು ಸಿದ್ಧಪಡಿಸಿಕೊಳ್ಳಲು ಮನಸ್ಸುಳ್ಳವರಿಗೆ ಸಮೃದ್ಧಿಯಾದ ಸದವಕಾಶವು ಒದಗಿಸಲ್ಪಟ್ಟಿದೆ. ಬಾಗಿಲುಗಳು ಪೂರ್ವ, ಉತ್ತರ, ದಕ್ಷಿಣ, ಹಾಗೂ ಪಶ್ಚಿಮ ದಿಕ್ಕುಗಳಲ್ಲಿದ್ದವು ಎಂಬುದು ಕ್ರೈಸ್ತತ್ವಕ್ಕಿರುವ ಜಾಗತಿಕ ಸೆಳೆತವನ್ನು ಸೂಚಿಸುತ್ತಿರಬಹುದಾಗಿದೆ. ನಾಲ್ಕು ದಿಕ್ಕುಗಳನ್ನು ಪಟ್ಟಿ ಮಾಡುವದು ಅನೇಕ ಸಾರಿ ಮಾನವರೆಲ್ಲರನ್ನೂ ಸೂಚಿಸುತ್ತದೆ. ಮನುಷ್ಯರು ಭೂಲೋಕದ ಎಲ್ಲಾ ಕಡೆಗಳಿಂದಲೂ ಬರುವರು (ಮತ್ತಾಯ 28:19; ಅಪೊಸ್ತಲರ ಕೃತ್ಯಗಳು 1:8).

**ವಚನ 14.** ಪ್ರಾಕಾರದ ಅತ್ಯಂಥ ಆಶ್ಚರ್ಯವಾದ ಲಕ್ಷಣವೆಂದರೆ ಅದರ ಅಸ್ತಿವಾರಗಳು. **ಪಟ್ಟಣದ ಪ್ರಾಕಾರಕ್ಕೆ ಹನ್ನೆರಡು ಅಸ್ತಿವಾರಗಳಿದ್ದವು; ಅವುಗಳ ಮೇಲೆ ಯಜ್ಞದ ಕುರಿಯಾದಾತನ ಹನ್ನೆರಡು ಮಂದಿ ಅಪೊಸ್ತಲರ ಹೆಸರುಗಳಿದ್ದವು.** ಈ ಚಿತ್ರಣವು ವಾಚಕನಿಗೆ ಕ್ರೈಸ್ತತ್ವವು "ಅಪೊಸ್ತಲರೂ ಪ್ರವಾದಿಗಳೂ ಎಂಬ ಹಾಕಿದ ಅಸ್ತಿವಾರದ ಮೇಲೆ ನೀವು ಮಂದಿರದೋಪಾದಿಯಲ್ಲಿ ಕಟ್ಟಲ್ಪಟ್ಟಿದೆ" (ಎಫೆಸ 2:20) ಎಂಬುದನ್ನು ಜ್ಞಾಪಿಸುವದಾಗಿತ್ತು. ಕೆಲವರು ಅನಾವಶ್ಯಕವಾಗಿ "ಪೌಲನು ಹೊರಗಿಡಲ್ಪಟ್ಟನೋ ಅಥವಾ ಇಲ್ಲವೋ" ಎಂಬುದರ ಕುರಿತು ಚಿಂತಿಸುತ್ತಾರೆ. **ಹನ್ನೆರಡು ಮಂದಿ ಅಪೊಸ್ತಲರು** ಎಂಬುದು *ಎಲ್ಲಾ* ಅಪೊಸ್ತಲರನ್ನು ಸೂಚಿಸುತ್ತದೆ ಮತ್ತು ಪ್ರಕಟನೆ ಪುಸ್ತಕದ ಈ ವಿಭಾಗದಲ್ಲಿ ವ್ಯಾಪಕವಾಗಿ ಬಳಸಲ್ಪಟ್ಟಿರುವ ಸಾಂಕೇತಿಕ ಸಂಖ್ಯೆಗೆ ಅನುಗುಣವಾಗಿರುತ್ತದೆ.

## ಪರಲೋಕದ ಪಟ್ಟಣವನ್ನು ಅಳತೆ ಮಾಡಲಾಗುತ್ತದೆ (21:15-21)

**[15]ನನ್ನ ಸಂಗಡ ಮಾತಾಡುತ್ತಿದ್ದವನು ಆ ಪಟ್ಟಣವನ್ನೂ ಅದರ ಬಾಗಿಲುಗಳನ್ನೂ ಅದರ ಪ್ರಾಕಾರವನ್ನೂ ಅಳತೆ ಮಾಡುವದಕ್ಕಾಗಿ ತನ್ನ ಕೈಯಲ್ಲಿ ಚಿನ್ನದ ಅಳತೇಕೋಲನ್ನು ಹಿಡಿದಿದ್ದನು. [16]ಪಟ್ಟಣವು ಚಚ್ಚೌಕವಾಗಿದೆ; ಅದರ ಉದ್ದವು ಅದರ ಅಗಲದಷ್ಟಿದೆ. ಅವನು ಆ ಪಟ್ಟಣವನ್ನು ಕೋಲಿನಿಂದ ಅಳತೆಮಾಡಿದನು; ಅಳತೆಯು ನೂರು ಮೈಲಿ ಆಯಿತು. ಅದರ ಉದ್ದವೂ ಅಗಲವೂ ಎತ್ತರವೂ ಸಮವಾಗಿವೆ. [17]ಅದರ ಪ್ರಾಕಾರವನ್ನೂ ಅಳತೆಮಾಡಿದನು; ಅದು ನೂರನಾಲ್ವತ್ತುನಾಲ್ಕು ಮೊಳವಾಯಿತು; ಈ ಲೆಕ್ಕದಲ್ಲಿ ಮನುಷ್ಯನ ಮೊಳ ಅಂದರೆ ದೇವದೂತನ ಮೊಳ. [18]ಆ ಪ್ರಾಕಾರವು ಸೂರ್ಯಕಾಂತಶಿಲೆಯಿಂದ ಕಟ್ಟಲ್ಪಟ್ಟಿತ್ತು. ಪಟ್ಟಣವು ಶುದ್ಧ ಗಾಜಿನಂತಿರುವ ಸೋಸಿದ ಬಂಗಾರವೇ. [19]ಪಟ್ಟಣದ ಪ್ರಾಕಾರದ ಅಸ್ತಿವಾರಗಳು ಸಕಲ ವಿಧವಾದ ರತ್ನಗಳಿಂದ ಅಲಂಕೃತವಾಗಿದ್ದವು. ಮೊದಲನೆಯ ಅಸ್ತಿವಾರವು ವಜ್ರ, ಎರಡನೇದು ವೈಡೂರ್ಯ, ಮೂರನೇದು ಪಚ್ಚೆ, [20]ನಾಲ್ಕನೇದು ಪದ್ಮರಾಗ, ಐದನೇದು ಗೋಮೇಧಿಕ, ಆರನೇದು ಮಾಣಿಕ್ಯ, ಏಳನೇದು ಪೀತರತ್ನ, ಎಂಟನೇದು ಬೆರುಲ್ಲ, ಒಂಭತ್ತನೇದು ಪುಷ್ಯರಾಗ, ಹತ್ತನೇದು ಗರುಡಪಚ್ಚೆ, ಹನ್ನೊಂದನೇದು ಇಂದ್ರನೀಲ, ಹನ್ನೆರಡನೇದು ನೀಲಸ್ಫಟಿಕ. [21]ಹನ್ನೆರಡು ಹೆಬ್ಬಾಗಿಲುಗಳು ಹನ್ನೆರಡು ಮುತ್ತುಗಳಾಗಿದ್ದವು; ಒಂದೊಂದು ಬಾಗಿಲು ಒಂದೊಂದು ಮುತ್ತಿನಿಂದ ಮಾಡಲ್ಪಟ್ಟಿತ್ತು. ಪಟ್ಟಣದ ಬೀದಿಯು ಸ್ವಚ್ಛವಾದ ಗಾಜಿನಂತಿರುವ ಸೋಸಿದ ಬಂಗಾರವಾಗಿತ್ತು.**

**ವಚನ 15. ನನ್ನ ಸಂಗಡ ಮಾತಾಡುತ್ತಿದ್ದವನು** [ದೇವದೂತನು] **ಆ ಪಟ್ಟಣವನ್ನೂ ಅದರ ಬಾಗಿಲುಗಳನ್ನೂ ಅದರ ಪ್ರಾಕಾರವನ್ನೂ ಅಳತೆ ಮಾಡುವದಕ್ಕಾಗಿ ತನ್ನ ಕೈಯಲ್ಲಿ ಚಿನ್ನದ**

**ಅಳತೆಕೋಲನ್ನು ಹಿಡಿದಿದ್ದನು** (ನೋಡಿರಿ ಯೆಹೆಜ್ಕೇಲ 40:3). ಈ ಮುಂಚೆ, ಯೋಹಾನನಿಗೆ ದೇವಾಲಯವನ್ನು ಅಳತೆ ಮಾಡುವದಕ್ಕಾಗಿ ಕೋಲನ್ನು ಕೊಡಲಾಗಿತ್ತು. ಅಳತೆಯನ್ನು ಒಂದು *ಕೋಲಿ*ನಿಂದ ಮಾಡಲಾಗುತ್ತಿತ್ತು ಮತ್ತು ಅದು ಭದ್ರತೆಯ ಉದ್ದೇಶಕ್ಕಾಗಿ ಇರುತ್ತಿತ್ತು (11:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). 21ನೇ ಅಧ್ಯಾಯದಲ್ಲಿ ಅಳತೆಯನ್ನು ಒಂದು *ಚಿನ್ನದ* ಸಾಧನದಿಂದ ಮಾಡಲಾಗುತ್ತದೆ, ವಾಚಕನ ಮೇಲೆ ಪರಲೋಕದ ವೈಭವದ ಕುರಿತು ಛಾಪು ಮೂಡಿಸುವ ಉದ್ದೇಶಕ್ಕಾಗಿ ಆಗಿರುತ್ತದೆ.

**ವಚನ 16.** ಪಟ್ಟಣದ ಗಾತ್ರವು ನಿಬ್ಬೆರಗಾಗಿಸುವಂಥದ್ದು: **ಪಟ್ಟಣವು ಚಚೌಕವಾಗಿದೆ; ಅದರ ಉದ್ದವು ಅದರ ಅಗಲದಷ್ಟಿದೆ. ಅವನು ಆ ಪಟ್ಟಣವನ್ನು ಕೋಲಿನಿಂದ ಅಳತೆಮಾಡಿದನು; ಅಳತೆಯು ಹನ್ನೆರಡು ನೂರು ಮೈಲಿ ಆಯಿತು. ಅದರ ಉದ್ದವೂ ಅಗಲವೂ ಎತ್ತರವೂ ಸಮವಾಗಿವೆ.** NASBಯು ಎಲ್ಲಾ ದಿಕ್ಕುಗಳಲ್ಲಿಯೂ **ಹನ್ನೆರಡು ಮೈಲಿ** ಎಂದು ಹೇಳುತ್ತದೆ: ಹನ್ನೆರಡು ಮೈಲಿ ಅಗಲ, ಹನ್ನೆರಡು ಮೈಲಿ ಆಳ, ಹನ್ನೆರಡು ಮೈಲಿ ಎತ್ತರ! ಅಂಥ **ಪಟ್ಟಣದ** ಬೃಹತ್ತಾಕಾರವನ್ನು ಊಹಿಸಿಕೊಳ್ಳಿರಿ. ಹನ್ನೆರಡು ಮೈಲಿಯು "ಅಂದಾಜಾಗಿ London ಮತ್ತು Athens ನಡುವಿನ ದೂರ, New York ಮತ್ತು Houston, Delhi ಮತ್ತು Rangoon ನಡುವಿನ, Adelaide ಮತ್ತು Darwin ನಡುವಿನ ದೂರವಾಗಿರುತ್ತದೆ."[20] ಹನ್ನೆರಡು ಮೈಲಿ ಎತ್ತರ! ಒಂದು ನೂರು ಅಂತಸ್ತುಗಳಷ್ಟು ಎತ್ತರವಾಗಿರುವ ಕಟ್ಟಡವೊಂದನ್ನು ಊಹಿಸಿಕೊಳ್ಳಿರಿ. (ಲೋಕದಲ್ಲಿ ಕೆಲವೇ ಕೆಲವು ಕಟ್ಟಡಗಳು ಅಷ್ಟೊಂದು ಎತ್ತರವಾಗಿರುತ್ತವೆ.) ಕಟ್ಟಡವನ್ನು ಉತ್ತರ ಅಮೆರಿಕದ ವರೆಗೂ ಸಾಗುವ ತನಕ ಹಿಗ್ಗಿಸುವದಕ್ಕೆ ಪ್ರಾರಂಭಿಸಿರಿ. ಅದು ನೂರ *ಐವತ್ತು* ಅಂತಸ್ತುಗಳಷ್ಟು ಎತ್ತರಕ್ಕೆ ತಲುಪುವ ವರೆಗೂ ಮೇಲಕ್ಕೆ ಎಳೇಯಿರಿ. ಬಳಿಕ ಇದನ್ನು ಕಂಡು ಆಶ್ಚರ್ಯಪಡಿರಿ: ನೀವು ಹನ್ನೆರಡು ಮೈಲಿ ಪರಲೋಕದಲ್ಲಿ ಅಂತಹ *ತೊಂಬತ್ತು* ಕಟ್ಟಡಗಳನ್ನು ಸರಿಹೊಂದಿಸಬುದು. ಈ ಪಟ್ಟಣವು ಭೂಮಿಯ ಮೇಲೆ ಎಂದಾದರೂ ನೋಡಿರಬಹುದಾದ ಯಾವದೇ ಪಟ್ಟಣವನ್ನು ಹೋಲುವಂಥದ್ದಾಗಿರಲಿಲ್ಲ ಎಂದು ಹೇಳಿದರೆ ಅದು ನ್ಯೂನೋಕ್ತಿಯಾಗುತ್ತದೆ.

NIVಯಲ್ಲಿ ಅಕ್ಷರಶಃ ಆ ಪಟ್ಟಣವು "ಹನ್ನೆರಡು ಸಾವಿರ ಸ್ತಾದ್ಯ ಉದ್ದ, ಮತ್ತು ಅಷ್ಟೇ ಅಗಲ ಹಾಗೂ ಉದ್ದದಷ್ಟೇ ಎತ್ತರವೂ ಆಗಿತ್ತು" ಎಂದು ಇರುತ್ತದೆ. ರೋಮನ್ στάδιον (*stadion*) ಒಂದು ಮೈಲಿಯ ಎಂಟನೆಯ ಒಂದು ಭಾಗದ ಅಳತೆಯಾಗಿರುತ್ತಿತ್ತು (14:20ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). NASBಯು ರೋಮನ್ ಅಳತೆಗಳನ್ನು ಮೈಲಿಗಳಾಗಿ ಪರಿವರ್ತಿಸುವ ಮೂಲಕ ಆಧುನಿಕ ವಾಚಕನಿಗೆ ಅರ್ಥವಾಗುವಂತೆ ಮಾಡಲು ಪ್ರಯತ್ನಿಸುತ್ತದೆ. ವಿಷಾದಕರವಾಗಿ, ಈ ಪರಿವರ್ತಿಸುವಿಕೆಯು ಸಂಖ್ಯೆಗಳ ಸಾಮಕೇತಿಕತೆಯನ್ನು ಹಾಳು ಮಾಡುತ್ತದೆ. "ಹನ್ನೆರಡು ನೂರು ಮೈಲಿ"ಗೆ ಸಾಂಕೇತಿಕ ಮಹತ್ವವಿರುವದಿಲ್ಲ, ಆದರೆ "ಹನ್ನೆರಡು ಸಾವಿರ" ಎಂಬುದಕ್ಕೆ ಇರುತ್ತದೆ.

16ನೇ ವಚನದಲ್ಲಿ ಕೊಡಲಾಗಿರುವ ವಿಸ್ತೀರ್ಣತೆಗಳು ಪಟ್ಟಣದ ಕುರಿತಾದ ಎರಡು ವಾಸ್ತವಾಂಶಗಳನ್ನು ತಿಳಿಸುತ್ತವೆ: ಮೊದಲನೆಯದಾಗಿ, ಅದು ಪರಿಪೂರ್ಣವಾಗಿರುತ್ತದೆ, ಅದು "ಹನ್ನೆರಡು" ಸಂಖ್ಯೆಯ ಬಳಕೆಯಲ್ಲಿ ಪ್ರತಿಫಲನಗೊಂಡಿರುತ್ತದೆ, ಅದು ಪ್ರಕಟನೆ ಪುಸ್ತಕದ ಈ ವಿಭಾಗದಲ್ಲಿ ವ್ಯಾಪಕವಾಗಿ ಬಳಸಲ್ಪಟ್ಟಿರುವ ಸಂಖ್ಯೆಯಾಗಿರುತ್ತದೆ (21:12, 14, 21; 22:2). "ಹನ್ನೆರಡು" - ದೇವತ್ವದ ಸಂಖ್ಯೆಯಾಗಿದ್ದು ("ಮೂರು") ಪಟ್ಟು ಸೃಷ್ಟಿಯ ಸಂಖ್ಯೆಯಷ್ಟಿದೆ ("ನಾಲ್ಕು") - ಸಂಪೂರ್ಣತೆ ಅಥವಾ ಪರಿಪೂರ್ಣತೆಯ ಯೋಚನೆಯನ್ನೊಳಗೊಂಡಿದೆ. ವರ್ಧಿಸಲ್ಪಟ್ಟ ಸಂಖ್ಯೆಯಾದ "ಹನ್ನೆರಡು *ಸಾವಿರ" ಸಂಪೂರ್ಣ* ಪರಿಪೂರ್ಣತೆಯನ್ನು

ಸೂಚಿಸುತ್ತದೆ. "ಹನ್ನೆರಡು ಸಾವಿರ" ಸಂಖ್ಯೆಯು ಒಂದು ಸಾವಿರವನ್ನು ಹನ್ನೆರಡು ಸಾರಿ ಗುಣಕಾರ ಮಾಡುವದರಿಂದ ಸಿಕ್ಕುತ್ತದೆ, ಅಂದರೆ ಹತ್ತು ಸಾರಿ ಹತ್ತು. "ಹತ್ತು" ಸ್ವತಃ ಸಂಪೂರ್ಣತೆಯ ಸಂಕೇತವಾಗಿದೆ. ಪಟ್ಟಣವು ಲೋಪಗಳಿಲ್ಲದ್ದೆಂಬುದು ಅದು ಒಂದು ಘನಾಕೃತಿಯಲ್ಲಿತ್ತೆಂಬುದರಿಂದ ಸಹ ನಾಟಕೀಕರಣಗೊಳಿಸಲ್ಪಟ್ಟಿರುತ್ತದೆ. ವಾಕ್ಯಭಾಗದ ಅಗತ್ಯತೆಯನ್ನು ಒಂದು ಫಿರಾಮಿಡ್ ಭರ್ತಿ ಮಾಡುವದು, ಆದರೆ ಸನ್ನಿವೇಶದಲ್ಲಿ ಘನಾಕೃತಿ ಉತ್ತಮವಾಗಿ ಸರಿ ಹೊಂದುತ್ತದೆ. ಪ್ರಾಚೀನರು ಘನಾಕೃತಿಯನ್ನು ಪರಿಪೂರ್ಣತೆಯ ಸಂಕೇತವಾಗಿ ಪರಿಗಣಿಸುತ್ತಿದ್ದರು. ದೇವಾಲಯದಲ್ಲಿನ ಅತಿ ಪರಿಶುದ್ಧ ಸ್ಥಳವು ಒಂದು ಪರಿಪೂರ್ಣ ಘನಾಕೃತಿಯಾಗಿತ್ತು (1 ಅರಸು 6:20), ಮತ್ತು ಹೊಸ ಯೆರೂಸಲೇಮ್ ಪಟ್ಟಣವು *ಅಂತಿಮ* "ಅತಿ ಪರಿಶುದ್ಧ ಸ್ಥಳ" ಎಂದು ಕರೆಯಲ್ಪಟ್ಟಿದೆ.

ಎರಡನೆಯದಾಗಿ, ವಿಫುಲವಾದ ಪ್ರಮಾಣಗಲು ಪರಲೋಕಕ್ಕೆ ಹೋಗುವದಕ್ಕೆ ನಿಜವಾಗಿಯೂ ಬಯಸುವವರಿಗೆ - ಸಿದ್ಧತೆಯನ್ನು ಮಾಡಿಕೊಳ್ಳುವಷ್ಟರ ಮಟ್ಟಿಗೆ ಅದನ್ನು ಬಯಸುವವನು - ಸಾಕಷ್ಟು ಪ್ರಮಾಣದಲ್ಲಿ ಏರ್ಪಾಡುಗಳನ್ನು ಮಾಡಲಾಗಿರುತ್ತದೆಂಬುದನ್ನು ಸೂಚ್ಯಾರ್ಥವಾಗಿ ತಿಳಿಸುತ್ತದೆ. ಹೀಗೆ ಆಮಂತ್ರಣವನ್ನು *ಪ್ರತಿಯೊಬ್ಬರಿಗೂ* ಕೊಡಬಹುದಾಗಿದೆ: "ಆತ್ಮನೂ ಮದಲಗಿತ್ತಿಯೂ - ಬಾ ಅನ್ನುತ್ತಾರೆ. ಕೇಳುವವನು - ಬಾ ಅನ್ನಲಿ. ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ" (22:17).

**ವಚನ 17.** ಚಿನ್ನದ ಅಳತೇಕೋಲನ್ನು ತೆಗೆದುಕೊಂಡು, ದೇವದೂತನು **ಅದರ ಪ್ರಾಕಾರವನ್ನೂ ಅಳತೆಮಾಡಿದನು; ಅದು ನೂರನಾಲ್ವತ್ತುನಾಲ್ಕು ಮೊಳವಾಯಿತು**. NIVಯಲ್ಲಿರುವ "ದೇವದೂತನು ಬಳಸುತ್ತಿದ್ದ ಮನುಷ್ಯನ ಅಳತೆಯ ಪ್ರಕಾರ" ಎಂಬ ಪದಗುಚ್ಛವು **ಈ ಲೆಕ್ಕದಲ್ಲಿ ಮನುಷ್ಯನ ಮೊಳ ಅಂದರೆ ದೇವದೂತನ ಮೊಳ** ಎಂಬ ಮಾತುಗಳಿಗೆ ತಾರ್ಕಿಕವಾದ ವಿವರಣೆಯಾಗಿರುತ್ತದೆ. ಯೋಹಾನನ ವಾಚಕರಿಗೆ ಪರಿಚಯವಿಲ್ಲದಂತಹ ಪರಲೋಕದ ಅಳತೆಯ ವ್ಯವಸ್ಥೆಯಿಂದ ದೇವದೂತನು ಅಳತೆ ಮಾಡಲಿಲ್ಲ.

ಪ್ರಾಕಾರವು **ನೂರನಾಲ್ವತ್ತನಾಲ್ಕು ಮೊಳ** ಇತ್ತು. NASBಯು ಪುನಃ ಸಂಖ್ಯೆಯ ಸಾಂಕೇತಿಕತೆಯನ್ನು ಆಧುನಿಕ ಅಳತೆಗಳನ್ನು ಬಳಸುವ ಮೂಲಕ ಅಸ್ಪಷ್ಟಗೊಳಿಸುತ್ತದೆ. NIVಯಲ್ಲಿ 144 ಮೊಳ ಎಂದು ಇರುತ್ತದೆ. ಒಂದು ಮೊಳ ಎಂದರೆ ಒಬ್ಬ ಮನುಷ್ಯನ ಮೊಣಕೈಯಿಂದ ಆತನ ಮಧ್ಯ ಬೆರಳಿನ ತುದಿಯ ವರೆಗಿನ ಅಂತರವಾಗಿರುತ್ತದೆ, ಅಂದರೆ, ಸುಮಾರು ಒಂದೂವರೆ ಅಡಿ. ಪ್ರಾಕಾರವು 144 ಮೊಳಗಳಷ್ಟು *ಎತ್ತರ* ಆಗಿತ್ತೋ ಅಥವಾ 144 ಮೊಳಗಷ್ಟು *ದಪ್ಪ*ವಾಗಿತ್ತೋ? ಪ್ರಾಕಾರವು 144 ಮೊಳಗಳಷ್ಟು ದಪ್ಪವಾಗಿತ್ತೆಂದು NIV ಸೂಚಿಸುತ್ತದೆ, ಆದರೆ ಬಹುಪಾಲು ಲೇಖಕರು ಇಲ್ಲಿ ಎತ್ತರವನ್ನು ಸೂಚಿಸಿ ಹೇಳಲಾಗಿದೆ ಎಂದು ಭಾವಿಸುತ್ತಾರೆ. ಅದು ಯಾವ ವಿಧದಲ್ಲಿದ್ದರೂ ಸಮಸ್ಯೆಯಿರುವದಿಲ್ಲ. ಎರಡರಲ್ಲಿ ಒಂದು ಸಾಧ್ಯತೆಯು ವಾಸ್ತುಶಿಲ್ಪದ ಪ್ರಕಾರ ಕಾರ್ಯರೂಪಕ್ಕೆ ತರಬಹುದಾದದ್ದಾಗಿದೆ, ಆದರೆ ಅದು ಪ್ರಾಮುಖ್ಯವಾಗಿರುವದಿಲ್ಲ ಯಾಕೆಂದರೆ ಸಂಖ್ಯೆಗಳು ಸಾಂಕೇತಿಕವಾಗಿವೆ. ಒಂದು ಪರಿಪೂರ್ಣತೆಯ ಸಂಖ್ಯೆಯು ಬಳಸಲ್ಪಟ್ಟಿದೆ: ಹನ್ನೆರಡು ಹನ್ನೆರಡರಿಂದ ಗುಣ ಮಾಡಲ್ಪಟ್ಟು 144ಕ್ಕೆ ಸಮವಾಗಿರುತ್ತದೆ. ಪಟ್ಟಣವು ಪರಿಪೂರ್ಣವಾದ ಭದ್ರತೆಯನ್ನು ಆನಂದಿಸುತ್ತಿತ್ತು.

**ವಚನ 18.** ಸ್ವತಃ ಪಟ್ಟಣದ ರೀತಿಯಲ್ಲಿಯೇ (21:11), **ಆ ಪ್ರಾಕಾರವು ಸೂರ್ಯಕಾಂತಶಿಲೆಯಿಂದ ಕಟ್ಟಲ್ಪಟ್ಟಿತ್ತು**. (ಈ ಬಣ್ಣನೆಯನ್ನು ಯೆಶಾಯ 54:11, 12ರಲ್ಲಿರುವ

ಬಣ್ಣನೆಯೊಂದಿಗೆ ಹೋಲಿಕೆ ಮಾಡಿರಿ.) ಅದು ಅಲೌಕಿಕವಾದ ಪ್ರಕಾಶಮಾನದಿಂದ ಮಿನುಗುತ್ತಿತ್ತು. ಒಟ್ಟಾರೆ ಪಟ್ಟಣದ ಕುರಿತಾಗಿ ಇನ್ನೊಂದು ವಿವರವು ಕೊಡಲ್ಪಟ್ಟಿರುತ್ತದೆ: 18ನೇ ವಚನವು **ಪಟ್ಟಣವು ಶುದ್ಧ ಗಾಜಿನಂತಿರುವ ಸೋಸಿದ ಬಂಗಾರವೇ** ಎಂದು ಹೇಳಿದರೆ, 21ನೇ ವಚನವು "ಪಟ್ಟಣದ ಬೀದಿಯು ಸ್ವಚ್ಛವಾದ ಗಾಜಿನಂತಿರುವ ಸೋಸಿದ ಬಂಗಾರವಾಗಿತ್ತು" ಎಂಬುದನ್ನು ಪ್ರಕಟಗೊಳಿಸುತ್ತದೆ. ಒಂದು ವಜ್ರದಂತೆ ಹೊಳೆಯುವ ಚಿನ್ನ? ಗಾಜಿನಂತೆ ಪಾರದರ್ಶಕವಾಗಿರುವ ಚಿನ್ನ? ಈ-ಭೂಮಿಯದ್ದಲ್ಲದ ಕಟ್ಟಡ ಸಾಮಗ್ರಿಯು ಪರಲೋಕ ಚಿನ್ನದಷ್ಟು ಅಮೂಲ್ಯ, ಅತ್ಯುನ್ನತವಾದ ವಜ್ರದಷ್ಟು ನಿರ್ಮಲವಾದದ್ದೆಂಬುದನ್ನು ಘೋಷಿಸುವಿಕೆಯಾಗಿದೆ.

**ವಚನಗಳು 19, 20.** ನಂತರ, ಬಣ್ಣನೆಯು 14ನೇ ವಚನದಲ್ಲಿ ಪ್ರಸ್ತಾಪಿಸಲಾದ ಅಸ್ತಿವಾರದ ಕಡೆಗೆ ತಿರುಗಿಕೊಳ್ಳುತ್ತದೆ. ಒಂದು ಪ್ರಾಕಾರದ ಅಸ್ತಿವಾರವು ಸಾಮಾನ್ಯವಾಗಿ ಭೂಮಿಯ ಮೇಲ್ಭಾಗದ ಕೆಳಗಡೆಯಲ್ಲಿರುತ್ತದೆ, ಆದರೆ ಈ ಅಸ್ತಿವಾರಗಳ ಕಲ್ಲುಗಳು ಕಾಣುವಂತೆ ಇದ್ದವು.

> **ಪಟ್ಟಣದ ಪ್ರಾಕಾರದ ಅಸ್ತಿವಾರಗಳು ಸಕಲ ವಿಧವಾದ ರತ್ನಗಳಿಂದ ಅಲಂಕೃತವಾಗಿದ್ದವು. ಮೊದಲನೆಯ ಅಸ್ತಿವಾರವು ವಜ್ರ, ಎರಡನೇದು ವೈಡೂರ್ಯ, ಮೂರನೇದು ಪಚ್ಚೆ, ನಾಲ್ಕನೇದು ಪದ್ಮರಾಗ, ಐದನೇದು ಗೋಮೇಧಿಕ, ಆರನೇದು ಮಾಣಿಕ್ಯ, ಏಳನೇದು ಪೀತರತ್ನ, ಎಂಟನೇದು ಬೆರುಲ್ಲ, ಒಂಭತ್ತನೇದು ಪುಷ್ಯರಾಗ, ಹತ್ತನೇದು ಗರುಡಪಚ್ಚೆ, ಹನ್ನೊಂದನೇದು ಇಂದ್ರನೀಲ, ಹನ್ನೆರಡನೇದು ನೀಲಸ್ಫಟಿಕ.**

ವ್ಯಾಖ್ಯಾನಕಾರರು ಈ ಆಭರಣಗಳ ಪಟ್ಟಿಯಿಂದ ಮನಸೆಳೆಯಲ್ಪಟ್ಟವರಾಗಿರುತ್ತಾರೆ, ಮತ್ತು ಅನೇಕರು ಈ ಪಟ್ಟಿಯನ್ನು ಬಗೆಹರಿಸಬೇಕಾದ ಒಗಟೆಂದು ಪರಿಗಣಿಸುತ್ತಾರೆ. ಕೆಲವರು ಆ ರತ್ನಗಳಲ್ಲಿ ಎಂಟು ರತ್ನಗಳು ಯಾಜಕನ ಎದೆಕವಚದಲ್ಲಿ ಸಿಕ್ಕುವ ರತ್ನಗಳಾಗಿದ್ದವು ಎಂಬುದನ್ನು ಗಮನಕ್ಕೆ ತರುತ್ತಾರೆ (ವಿಮೋಚನಕಾಂಡ 28:15–21). ಇನ್ನು ಕೆಲವರು ಆ ಕಾಲದಲ್ಲಿ ರತ್ನಗಳನ್ನು ಮೂಢನಂಬಿಕೆಯಿಂದ ಬಳಸಲ್ಪಡುತ್ತಿದ್ದರ ಕುರಿತು ಒಂದು ರೀತಿಯ ತಿರುವನ್ನು ಮುಂದಿಡುತ್ತಾರೆ. ಹೇಗೂ, ಆ ಕಾಲದಲ್ಲಿ ಅಮೂಲ್ಯ ರತ್ನಗಳ ಹೆಸರುಗಳ ಬಗ್ಗೆ ಒಂದು ಏಕರೀತಿಯು ಇರಲಿಲ್ಲವಾದ್ದರಿಂದ, 19 ಮತ್ತು 20 ವಚನಗಳಲ್ಲಿ ಆ ಪದಗಳಿಂದ *ಯಾವ* ರತ್ನಗಳನ್ನು ಸೂಚಿಸಿ ಹೇಳಲಾಗಿದೆ ಎಂಬುದು ನಮಗೆ ನಿಶ್ಚಯವಾಗಿ ತಿಳಿಯಲು ಸಹ ಆಗುವದಿಲ್ಲ. ಒಂದು "ಆಳವಾದ" ಮಹತ್ವಪೂರ್ಣತೆಯನ್ನು ಹುಡುಕುವದಕ್ಕಿಂತಲೂ ಪ್ರದರ್ಶನದ *ಒಟ್ಟು* ಪರಿಣಾಮವನ್ನು ಊಹಿಸಿಕೊಳ್ಳುವದು ಉತ್ತಮವಾಗಿರುತ್ತದೆ. ಮುಂದಿನ ಪರಿಚ್ಛೇದದಲ್ಲಿನ ಪಟ್ಟಿಯು ಬಣ್ಣಗಳ ವಿಷಯವಾಗಿ ಶೇಕಡಾ 100ರಷ್ಟು ನಿಖರವಾಗಿರಬಹುದು ಅಥವಾ ಇಲ್ಲದಿರಬಹುದು, ಆದರೆ ಅದು ಒಂದು ಅತ್ಯಾಡಂಬರದ ಅಲಂಕಾರವನ್ನು ಬಣ್ಣಿಸುತ್ತದೆ.

ವಾಚಕನು ಅದ್ಭುತವಾದ ಪ್ರದರ್ಶನದ ಕುರಿತು ಕೇವಲ ಊಹಿಸಿಕೊಳ್ಳಬಲ್ಲನು. ಆತನು ವಜ್ರದ ಹಸಿರು ಬಣ್ಣ, ವೈಡೂರ್ಯದ ನೀಲಿ ಬಣ್ಣ, ಪಚ್ಚೆಯ ಹಾಲಿನಂಥ ಕಂದು ಬಣ್ಣ, ಪದ್ಮರಾಗದ ಹಸಿರು, ಗೋಮೇಧಿಕದ ಬಿಳಿ ಬಣ್ಣ, ಮಾಣಿಕ್ಯದ ಕೆಂಪು, ಪೀತರತ್ನದ ಹಳದಿ ಮಿಶ್ರಿತ ಹಸಿರು, ಬೆರುಲ್ಲದ ನೇರಳೆ, ಪುಷ್ಪರಾಗದ ಹಳದಿ, ಗರುಡಪಚ್ಚೆಯ ಹಸಿರು, ಇಂದ್ರನೀಲದ ನೀಲಿ ಬಣ್ಣ, ಇತ್ತು ನೀಲಸ್ಫಟಿಕದ ನೇರಳೆ ಈ ಬಣ್ಣಗಳಿಂದ ಹೊಳಪಿನಿಂದ ಕಣ್ಣುಕೋರೈಸಿಕೊಳ್ಳುವನು. ಅಪೊಸ್ತಲರ ಉಪದೇಶ ಹಾಗೂ ಮಾದರಿಯ ಮೂಲಕ

ಹಾಕಲ್ಪಟ್ಟಿರುವ "ಅಸ್ತಿವಾರ"ಕ್ಕೆ ಎಂಥ ಅತ್ಯಮೋಘವಾದ ಅಭಿನಂದನೆ!

**ವಚನ 21.** ಪುನಃ 12 ಮತ್ತು 13 ವಚನಗಳಲ್ಲಿನ "ಹನ್ನೆರಡು ಹೆಬ್ಬಾಗಿಲುಗಳ" ಕಡೆಗೆ: ಈ ಹೆಬ್ಬಾಗಿಲುಗಳ ವಿಷಯದಲ್ಲಿ ಅತ್ಯಂಥ ಆಶ್ಚರ್ಯಕರವಾದ ಅಂಶವೆಂದರೆ ಅವುಗಳು ಸಂಯೋಜನೆ. **ಹನ್ನೆರಡು ಹೆಬ್ಬಾಗಿಲುಗಳು ಹನ್ನೆರಡು ಮುತ್ತುಗಳಾಗಿದ್ದವು; ಒಂದೊಂದು ಬಾಗಿಲು ಒಂದೊಂದು ಮುತ್ತಿನಿಂದ ಮಾಡಲ್ಪಟ್ಟಿತ್ತು.** ಇವುಗಳು ಅನೇಕ ಸಾರಿ ಬಳಸಲ್ಪಡುವ "ಮುತ್ತುಗಳಿಂದ ಕೂಡಿದ ಬಾಗಿಲುಗಳು" ಎಂಬ ಪದದಂತೆ ಮುತ್ತುಗಳಿಂದ *ಆವರಿಸಲ್ಪಟ್ಟಿದ್ದ* ಬಾಗಿಲುಗಳಾಗಿರಲಿಲ್ಲ; ಬದಲಾಗಿ ಅವುಗಳು ಮುತ್ತುಗಳು *ಆಗಿದ್ದವು.* ಮುತ್ತುಗಳು ಪ್ರಾಚೀನ ಜಗತ್ತಿನಲ್ಲಿ ಅತ್ಯಂಥ ಹೆಚ್ಚು ಬೇಡಿಕೆಯಲ್ಲಿದ್ದು ಆಭರಣಗಳಾಗಿದ್ದು (ನೋಡಿರಿ ಮತ್ತಾಯ 13:46; 1 ತಿಮೊಥೆ 2:9). ಒಂದ ಇಪ್ಪತ್ತು-ಧಾನ್ಯ-ಮುತ್ತಿನ ಬೆಲೆಯು ಬದುಕನ್ನೆಲ್ಲಾ ಮಾರಿ ಕೊಂಡುಕೊಳ್ಳುವಷ್ಟು ಬೆಲೆಯುಳ್ಳದ್ದಾಗಿತ್ತು - ಅದು ಒಬ್ಬ ವ್ಯಕ್ತಿಯ ಕಿರು ಬೆರಳಿನ ತುದಿಯಷ್ಟು ಗಾತ್ರವಿರುತ್ತಿತ್ತು. ಒಬ್ಬ ಮನುಷ್ಯನಲ್ಲಿ ಆ ಗಾತ್ರದ ಹಲವಾರು ಮುತ್ತುಗಳಿರುವದಾದರೆ, ಆತನು ಜೀವಿತವೆಲ್ಲಾ ಕೆಲಸ ಮಾಡದೆ ಬದುಕಬಹುದಿತ್ತು. ಹಾಗಾದರೆ, ಹನ್ನೆರಡು ಬೃಹತ್ತಾಕಾರದ ಮುತ್ತುಗಳು, ಒಂದು ಪಟ್ಟಣಕ್ಕೆ ಬಾಗಿಲು ಆಗಿರುವಷ್ಟರ ಮಟ್ಟಿಗೆ ದೊಡ್ಡವುಗಳಾಗಿರುವಂಥದ್ದನ್ನು ಊಹಿಸಿಕೊಳ್ಳಿರಿ! ನಾವು ಅಂತಹ ಬಣ್ಣನೆಗಳನ್ನು ಅಕ್ಷರಶಃ ತೆಗೆದುಕೊಳ್ಳಬೇಕೋ? Charles Spurgeonನ ಒಂದು ಪಟ್ಟಣದ ಬಾಗಿಲು ಆಗುಷ್ಟು ಗಾತ್ರದ ಒಂದು ಮುತ್ತನ್ನು ಒದಗಿಸುವದಕ್ಕೆ ಬೇಕಾಗುವ ಸಿಂಪಿಯ ಗಾತ್ರವನ್ನು ಲೆಕ್ಕಾಚಾರ ಮಾಡಿದನು. ಬಳಿಕ ಆತನು ಅಂತಹ ಒಂದು ಸಿಂಪಿಯನ್ನು ಬೆಳೆಸುವದಕ್ಕೆ ಅಗತ್ಯವಿರುವ ಸಮುದ್ರದ ಗಾತ್ರವನ್ನು ಲೆಕ್ಕ ಮಾಡಿದನು.[22] ಹೀಗೆ ಆತನು ಸಾಂಕೇತಿಕತೆಯನ್ನು ಅಕ್ಷರಶಃ ಅರ್ಥೈಸಿಕೊಳ್ಳುವದಕ್ಕೆ ಪ್ರಯತ್ನಿಸುವದರ ಅರ್ಥಶೂನ್ಯತೆಯನ್ನು ನಾಟಕೀಕರಣಗೊಳಿಸಿದನು.

**ಪಟ್ಟಣದ ಬೀದಿಯು ಸ್ವಚ್ಛವಾದ ಗಾಜಿನಂತಿರುವ ಸೋಸಿದ ಬಂಗಾರವಾಗಿತ್ತು** (ವ. 18ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ಚಿತ್ರಣಗಳನ್ನು ನಮ್ಮನ್ನು ನಿಬ್ಬೆರಗಾಗಿರುವದಕ್ಕಾಗಿ - ಮೇಲೆಸಿರೆಳೆಯುತ್ತಾ, ನಮ್ಮ ತಲೆಗಳನ್ನು ಅಲ್ಲಾಡಿಸುತ್ತಾ, "ಪರಲೋಕವು ಇದಕ್ಕಿಂತ ಇನ್ನೂ ಎಷ್ಟೋ ಅದ್ಭುತಕರವಾಗಿರುವದಾದರೆ, ಅದು ಎಷ್ಟು ಅತ್ಯಾಶ್ಚರ್ಯಕರವಾಗಿರಬಲ್ಲದು!" ಎಂದು ಹೇಳುವಂತೆ ಮಾಡುವದಕ್ಕಾಗಿಯೇ ಆಗಿದೆ.

## ದೇವರೇ ಬೆಳಕು (21:22-27)

**22ಪಟ್ಟಣದಲ್ಲಿ ನಾನು ದೇವಾಲಯವನ್ನು ಕಾಣಲಿಲ್ಲ; ಯಾಕಂದರೆ ಸರ್ವಶಕ್ತನಾದ ದೇವರಾಗಿರುವ ಕರ್ತನೂ ಯಜ್ಞದ ಕುರಿಯಾದಾತನೂ ಅದರ ದೇವಾಲಯವಾಗಿದ್ದಾರೆ.**
**23ಪಟ್ಟಣಕ್ಕೆ ಬೆಳಕನ್ನು ಕೊಡುವದಕ್ಕಾಗಿ ಸೂರ್ಯನಾಗಲಿ ಚಂದ್ರನಾಗಲಿ ಬೇಕಾಗಿಲ್ಲ. ಅದಕ್ಕೆ ದೇವರ ಪ್ರಭಾವವೇ ಬೆಳಕನ್ನು ಕೊಟ್ಟಿತು; ಯಜ್ಞದ ಕುರಿಯಾದಾತನೇ ಅದರ ದೀಪವು. 24ಅದರ**
**ಬೆಳಕಿನಿಂದ ಸರ್ವಜನಾಂಗದವರು ಸಂಚಾರಮಾಡುವರು; ಭೂರಾಜರು ತಮ್ಮ ವೈಭವವನ್ನು ಅಲ್ಲಿಗೆ ತರುವರು. 25ಅದರ ಬಾಗಿಲುಗಳನ್ನು ಹಗಲಿನಲ್ಲಿ ಮುಚ್ಚುವದೇ ಇಲ್ಲ; ರಾತ್ರಿಯಂತೂ**
**ಅಲ್ಲಿಲ್ಲ. 26ಜನಾಂಗಗಳ ವೈಭವವೂ ಘನವೂ ಅಲ್ಲಿಗೆ ಬರುವವು. 27ಅದರಲ್ಲಿ**
**ಹೊಲೆಯಾದದ್ದೊಂದೂ ಸೇರುವದಿಲ್ಲ, ಅಸಹ್ಯವಾದದ್ದನ್ನೂ ಸುಳ್ಳಾದದ್ದನ್ನೂ ನಡಿಸುವವನು ಸೇರುವದಿಲ್ಲ; ಯಜ್ಞದ ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಯಾರಾರ ಹೆಸರುಗಳು ಬರೆದವೆಯೋ ಅವರು ಮಾತ್ರ ಸೇರುವರು.**

**ವಚನ 22.** 21ನೇ ವಚನವು ಅಮೂಲ್ಯ ರತ್ನಗಳು ಹಾಗೂ ದುಬಾರಿ ಲೋಹಗಳ ವಿಷಯದಲ್ಲಿ ಬಹಳಷ್ಟುನ್ನು ತಿಳಿಸಿತ್ತು, ಆದರೆ ಪರಲೋಕವನ್ನು ಪರಲೋಕವನ್ನಾಗಿಸುವಂಥದ್ದು ಈ ಆಭರಣಗಳಾಗಲಿ ಮತ್ತು ಚಿನ್ನವಾಗಲಿ ಅಲ್ಲ; ಬದಲಾಗಿ, ದೇವರ ಪ್ರಸನ್ನತೆಯೇ ಅದನ್ನು ಪರಲೋಕವನ್ನಾಗಿ ಮಾಡುತ್ತದೆ. ಯೋಹಾನನು 22ನೇ ವಚನದಲ್ಲಿ ಹೀಗೆ ಬರೆದನು, **ಪಟ್ಟಣದಲ್ಲಿ ನಾನು ದೇವಾಲಯವನ್ನು ಕಾಣಲಿಲ್ಲ; ಯಾಕಂದರೆ ಸರ್ವಶಕ್ತನಾದ ದೇವರಾಗಿರುವ ಕರ್ತನೂ ಯಜ್ಞದ ಕುರಿಯಾದಾತನೂ ಅದರ ದೇವಾಲಯವಾಗಿದ್ದಾರೆ.** ಈ ಮುಂಚೆ, ಜಯಶಾಲಿಗಳು "... *ಆತನ ಆಲಯದಲ್ಲಿ* ಹಗಲಿರುಳು ಆತನ ಸೇವೆಮಾಡುತ್ತಾ ಇದ್ದಾರೆ" ಎಂದು ಹೇಳಲಾಗಿರುತ್ತದೆ (7:15; ಒತ್ತಿ ಹೇಳಿದ್ದು ನನ್ನದು), ಅದೇ ವೇಳೆಯಲ್ಲಿ ಈ ವಚನವು ಪರಲೋಕದಲ್ಲಿ **ದೇವಾಲಯವನ್ನು ಕಾಣಲಿಲ್ಲ** ಎಂದು ಹೇಳುತ್ತದೆ. ಈ ವ್ಯತ್ಯಾಸವು ಸಾಂಕೇತಿಕ ಭಾಷೆಯ ಬದಲಾಗುವ ಸ್ವಭಾವವನ್ನು ದೃಷ್ಟಾಂತಪಡಿಸುತ್ತದಷ್ಟೆ. ಪರಲೋಕದಲ್ಲಿ ದೇವಾಲಯವು ಇಲ್ಲ, ಯಾಕೆಂದರೆ ಅದೇ ಒಂದು ದೇವಾಲಯ *ಆಗಿದೆ.* ಪರಲೋಕವು ದೇವರು ತನ್ನ ಜನರನ್ನು ಸಂಧಿಸುವದ ಸ್ಥಳವಾಗಿದೆ; ಅದು ದೇವರ ನಿವಾಸವಾಗಿದೆ. ಪಟ್ಟಣವು ಮಹಿಮಕರಣಗೊಂಡಿರುವ ಸಭೆಯನ್ನು ಪ್ರತಿನಿಧಿಸುತ್ತದೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ, ಮತ್ತು ಪೌಲನು ಒತ್ತಿ ಹೇಳಿದ್ದೇನೆಂದರೆ, ಕ್ರೈಸ್ತ ಯುಗದಲ್ಲಿ ಸಭೆಯು ದೇವರ ಆಲಯವಾಗಿದೆ - ಆತನು ವಾಸಿಸು ವಿಶೇಷ ಸ್ಥಳ (1 ಕೊರಿಂಥ 3:16; ಎಫೆಸ 2:21).

ಹಳೆಯ ಒಡಂಬಡಿಕೆಯ ವಿವಿಧ ವಾಕ್ಯಭಾಗಗಳು ಈ ವಿಭಾಗದಲ್ಲಿ ಪಟ್ಟಿ ಮಾಡಲಾಗಿದ್ದು ಅವುಗಳು ಯೋಹಾನನು ಬಳಸುವ ಭಾಷೆಯನ್ನು ಪ್ರತಿಫಲಿಸಬಹುದಾಗಿದೆ. ಇವುಗಳಲ್ಲಿ ಹಲವಾರು ವಾಕ್ಯಭಾಗಗಳು ಯೆಹೆಜ್ಕೇಲನ ಪುಸ್ತಕದಲ್ಲಿರುತ್ತವೆ. ಹೇಗೂ, ನಾವು ಈ "ತಿರುವು" ಗಮನಿಸತಕ್ಕದ್ದು: ಯೆಹೆಜ್ಕೇಲನು ತನ್ನ ಆದರ್ಶ ಪಟ್ಟಣದಲ್ಲಿ ದೇವಾಲಯವು ಮರುಸ್ಥಾಪಿಸಲ್ಪಡುವದರ ಕುರಿತಾಗಿ ಮಾತಾಡುವದಕ್ಕೆ ಏಳು ಅಧ್ಯಾಯಗಳನ್ನು ಬಳಸಿದರೆ, ಯೋಹಾನನು ಪಟ್ಟಣದಲ್ಲಿ ಆತನು ಬಣ್ಣಿಸಿದ "ದೇವಾಲಯವನ್ನು ಕಾಣಲಿಲ್ಲ" ಎಂದು ಹೇಳುತ್ತಾನೆ.

**ವಚನ 23.** ಯೋಹಾನನು ಇನ್ನೂ ಹೇಳಿದ್ದೇನೆಂದರೆ, **ಪಟ್ಟಣಕ್ಕೆ ಬೆಳಕನ್ನು ಕೊಡುವದಕ್ಕಾಗಿ ಸೂರ್ಯನಾಗಲಿ ಚಂದ್ರನಾಗಲಿ ಬೇಕಾಗಿಲ್ಲ. ಅದಕ್ಕೆ ದೇವರ ಪ್ರಭಾವವೇ ಬೆಳಕನ್ನು ಕೊಟ್ಟಿತು; ಯಜ್ಞದ ಕುರಿಯಾದಾತನೇ ಅದರ ದೀಪವು.** (ಯೆಶಾಯ 60:11ರೊಂದಿಗೆ ಹೋಲಿಕೆ ಮಾಡಿರಿ.) ದೇವರು ಬೆಳಕಾಗಿದ್ದಾನೆ (ನೋಡಿರಿ ಕೀರ್ತನೆ 36:9; ಯೆಶಾಯ 60:19, 20; 1 ಯೋಹಾನ 1:5) ಮತ್ತು ಯೇಸುವು ಬೆಳಕಾಗಿದ್ದಾನೆ (ನೋಡಿರಿ ಯೋಹಾನ 1:9; 3:19; 8:12; 12:35) ಎಂಬ ವಿಷಯದಲ್ಲಿ ಬೈಬಲ್ ಬಹಳಷ್ಟೊಂದನ್ನು ಹೇಳುತ್ತದೆ.

**ವಚನ 24.** 24ನೇ ವಚನದ ಮೊದಲ ಭಾಗವು ಹೇಳುವದೇನೆಂದರೆ ಪರಲೋಕದ **ಬೆಳಕಿನಿಂದ ಸರ್ವಜನಾಂಗದವರು ಸಂಚಾರಮಾಡುವರು.** ವಚನವು ಮುಂದುವರೆದು **ಭೂರಾಜರು ತಮ್ಮ ವೈಭವವನ್ನು** ಆ ಪಟ್ಟಣಕ್ಕೆ **ತರುವರು** ಎಂದು ಹೇಳುತ್ತದೆ. 26ನೇ ವಚನವು ಹೇಳುವದೇನೆಂದರೆ "ಜನಾಂಗಗಳ ವೈಭವವೂ ಘನವೂ ಅಲ್ಲಿಗೆ ಬರುವವು." ಇಲ್ಲಿರುವ ಸಾಂಕೇತಿಕತೆಯೇನೆಂದರೆ ಅರಸರು ಒಬ್ಬ ದೊರೆಯನ್ನು ತಮಗಿಂತಲೂ ದೊಡ್ಡವನೆಂದು ಒಪ್ಪಿಕೊಂಡು ಅವರಿಗೆ ಸನ್ಮಾನವನ್ನು ತರುವದನ್ನು ಕುರಿತಾಗಿರುತ್ತದೆ. ಪ್ರಕಟನೆ ಪುಸ್ತಕದುದ್ದಕ್ಕೂ, ಕರ್ತನು ಜನಾಂಗಗಳ ಮೇಲೆ ಅರಸನಾಗಿದ್ದಾನೆ, ಮತ್ತು ಒಂದು ದಿನ ಎಲ್ಲರೂ ಆತನ ಕರ್ತತ್ವವನ್ನು ಒಪ್ಪಿಕೊಳ್ಳುವರು ಎಂಬುದು ಒತ್ತಿ ಹೇಳಲ್ಪಟ್ಟಿದೆ (2:26; 12:5; 15:3, 4). ಸರ್ವಕಾಲಕ್ಕೂ ಜೀವಿಸಿದ ಅತ್ಯಂಥ ಶಕ್ತಿಶಾಲಿ ರಾಜರು ಭೂಲೋಕದ

ಅತ್ಯಂಥ ಶ್ರೇಷ್ಠವಾದ ನಿಕ್ಷೇಪಗಳನ್ನು ತಂದು ಅವುಗಳನ್ನು ಸಿಂಹಾಸನದ ಮುಂದೆ ಹರಡಿ, ದೇವರನ್ನು ರಾಜಾಧಿರಾಜನೆಂದೂ ಕರ್ತರ ಕರ್ತನೆಂದೂ ಅರಿಕೆ ಮಾಡುವದನ್ನು ಊಹಿಸಿಕೊಳ್ಳಿರಿ. ಸಾಂಕೇತಿಕತೆಯು *ಎಲ್ಲಾ* ಪ್ರಭಾವವು ದೇವರಿಗೆ ಸೇರಿದ್ದು ಮತ್ತು *ಎಲ್ಲಾ* ಪ್ರಭಾವವು ಪರಲೋಕದಲ್ಲಿರುವದು ಎಂಬ ಯೋಚನೆಯನ್ನು ಪುನರ್ದೃಢೀಕರಿಸುತ್ತದೆ.

ವಿಷಾದಕರವಾಗಿ, ಕೆಲವು ಲೇಖಕರು **ಸರ್ವಜನಾಂಗದವರು** ಎಂಬ ಪದದ ಮೇಲೆ ಮುಖ್ಯ ಗಮನವನ್ನು ಹರಿಸುತ್ತಾರೆ ಮತ್ತು ಆ ವಾಕ್ಯಭಾಗವು ಸಾರ್ವತ್ರಿಕ ರಕ್ಷಣೆಯನ್ನು ಕಲಿಸುತ್ತದೆಂಬ ನಿರ್ಧಾರಕ್ಕೆ ಬಂದು ಬಿಡುತ್ತಾರೆ. ಅವರು ಪ್ರಕಟನೆ ಪುಸ್ತಕದಲ್ಲಿ ಸಾಮಾನ್ಯವಾಗಿ "ಜನಾಂಗಗಳು" ಎಂಬ ಪದವು ಅವಿಶ್ವಾಸಿಗಳನ್ನು ಸೂಚಿಸುತ್ತದೆಂಬದನ್ನು ಗಮನಕ್ಕೆ ತರುತ್ತಾರೆ (11:2, 9, 18; 14:8; 16:19), ಮತ್ತು ಹೀಗೆ 21:24ನೇ ವಚನವು ಎಲ್ಲಾ ಜನರು - ಅವರು ನಂಬಲಿ ಅಥವಾ ನಂಬದೆ ಹೋಗಲಿ - ರಕ್ಷಣೆ ಹೊಂದುವರೆಂಬುದನ್ನು ಕಲಿಸುತ್ತದೆಂಬ ಮುಕ್ತಾಯಕ್ಕೆ ಬರುತ್ತಾರೆ. ಈ ಲೇಖಕರು ಹೇಗೆ ಇಂತಹ ನಿರ್ಧಾರಕ್ಕೆ ಬರುತ್ತಾರೆಂಬುದು ತಿಳಿಯುವದಿಲ್ಲ, ಯಾಕೆಂದರೆ 27ನೇ ವಚನವು "ಅದರಲ್ಲಿ ಹೊಲೆಯಾದದ್ದೊಂದೂ ಸೇರುವದಿಲ್ಲ, ಅಸಹ್ಯವಾದದ್ದನ್ನೂ ಸುಳ್ಳಾದದ್ದನ್ನೂ ನಡಿಸುವವನು ಸೇರುವದಿಲ್ಲ; ಯಜ್ಞದ ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಯಾರಾರ ಹೆಸರುಗಳು ಬರೆದವೆಯೋ ಅವರು *ಮಾತ್ರ* ಸೇರುವರು" ಎಂದು ಹೇಳುತ್ತದೆ (ಒತ್ತಿ ಹೇಳಿದ್ದು ನನ್ನದು). ಸಾಮಾನ್ಯವಾಗಿ ಪ್ರಕಟನೆ ಪುಸ್ತಕದಲ್ಲಿ, "ಜನಾಂಗಗಳು" ಎಂಬ ಪದವು ಕ್ರಿಸ್ತನಿಗೆ ಅವಿಧೇಯರಾಗಿರುವವರನ್ನು ಸೂಚಿಸುತ್ತದೆ, ಆದರೆ ಈ ಸನ್ನಿವೇಶದಲ್ಲಿ "ಜನಾಂಗಗಳು" ಎಂಬುದು ಆ ಅರ್ಥವನ್ನು ಹೊಂದಿರುವದಕ್ಕೆ ಸಾಧ್ಯವಿಲ್ಲ (ವ. 26ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನ 25. ಅದರ ಬಾಗಿಲುಗಳನ್ನು ಹಗಲಿನಲ್ಲಿ ಮುಚ್ಚುವದೇ ಇಲ್ಲ; ರಾತ್ರಿಯಂತೂ ಅಲ್ಲಿಲ್ಲ.** ಯೋಹಾನನ ದಿನದಲ್ಲಿ, ಪಟ್ಟಣಗಳು ಸುರಕ್ಷತೆಗೋಸ್ಕರ ರಾತ್ರಿಯಲ್ಲಿ ತಮ್ಮ ಬಾಗಿಲುಗಳನ್ನು ಮುಚ್ಚಿಕೊಳ್ಳುತ್ತಿದ್ದವು. ಪರಲೋಕದ **ಬಾಗಿಲುಗಳು** ಎಂದಿಗೂ ಮುಚ್ಚುವದಿಲ್ಲ, ಯಾಕೆಂದರೆ ಅಲ್ಲಿ **ರಾತ್ರಿಯಂತೂ ಅಲ್ಲಿಲ್ಲ.** ದೇವರ ಪ್ರಭಾವ ಹಾಗೂ ಯಜ್ಞದ ಕುರಿಯದಾತನ ಪ್ರಭಾವವು ಎಲ್ಲಾ ಕ್ಷೇತ್ರವನ್ನೂ ಆವರಿಸಿಕೊಳ್ಳುವದು ಹಾಗೂ ಪ್ರತಿಯೊಂದು ಮೂಲೆಗೂ ತೂರಿಕೊಂಡು ಹೋಗುವದು. ತೆರೆದಿರುವ ಬಾಗಿಲುಗಳ ಸಂಕೇತದ ಅರ್ಥವು ಜನರು ನ್ಯಾಯತೀರ್ಪಿನ ಬಳಿಕ ಸ್ವರ್ಗೀಯ ಪಟ್ಟಣದಲ್ಲಿ ಬರುತ್ತಲೂ ಹೊರಡುತ್ತಲೂ ಇರುವರೆಂಬದಲ್ಲ. ತೆರೆದ ಬಾಗಿಲುಗಳು ಕೇವಲ ಸುರಕ್ಷತೆಯ ಸಂಕೇತವಾಗಿವೆಯಷ್ಟೇ.

**ವಚನ 26. ಜನಾಂಗಗಳ ವೈಭವವೂ ಘನವೂ ಅಲ್ಲಿಗೆ ಬರುವವು.** ಪ್ರಕಟನೆ ಪುಸ್ತಕವು ಕಲಿಸುವದೇನೆಂದರೆ "ಸಕಲ ಜನಾಂಗ" ದಿಂದಲೂ, ಯೇಸುವಿನಲ್ಲಿ ನಂಬಿಕೆ*ಯಿಡುವ* ಹಾಗೂ ಅತನ ರಕ್ತದಿಂದ ತೊಳೆಯಲ್ಪ*ಟ್ಟಿರುವ* ಜನರು ಇರುತ್ತಾರೆಂಬುದೆ (5:9; 7:9). **ಜನಾಂಗಗಳ** ನಿಜವಾದ **ವೈಭವವು** ಭೂಮಿಯ ಮೇಲೆ "ಬೆಳಕಿನಲ್ಲಿ" ನಡೆದಂಥ (1 ಯೋಹಾನ 1:7), ಮತ್ತು ಪರಲೋಕದಲ್ಲಿ "[ಆತನ] ಬೆಳಕಿನಿಂದ ಸಂಚಾರಮಾಡುವ"ದನ್ನು ಮುಂದುವರೆಸುವಂಥ ಪ್ರತಿಯೊಂದು ಜನಾಂಗದಿಂದ ಪ್ರಕಾಶಿಸುವದು (ವ. 24ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಖಂಡಿತವಾಗಿಯೂ, ವೈಭವದ ಉಗಮಸ್ಥಾನವು ದೇವರೇ ಆಗಿರುವನು (4:11). ಬೇರೆ ಯಾವದೇ ವೈಭವವು ಆತನ ಪ್ರತಿಬಿಂಬವಾಗಿರುತ್ತದಷ್ಟೆ.

**ವಚನ 27. ಅದರಲ್ಲಿ ಹೊಲೆಯಾದದ್ದೊಂದೂ ಸೇರುವದಿಲ್ಲ, ಅಸಹ್ಯವಾದದ್ದನ್ನೂ ಸುಳ್ಳಾದದ್ದನ್ನೂ ನಡಿಸುವವನು ಸೇರುವದಿಲ್ಲ; ಯಜ್ಞದ ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಯಾರಾರ ಹೆಸರುಗಳು ಬರೆದವೆಯೋ ಅವರು ಮಾತ್ರ ಸೇರುವರು.** ಇಲ್ಲಿ

ಬಳಸಲಾಗಿರುವ ಬಹುತೇಕ ಪದಗಳು ಅಧ್ಯಾಯದ ಆರಂಭದಲ್ಲಿ ಕಂಡು ಬರುತ್ತವೆ (ವ. 8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). **ಹೊಲೆಯಾದದ್ದು** ಎಂಬ ಪದವು ಅನೇಕ ಸಾರಿ ವಿಗ್ರಹಾರಾಧನೆಯನ್ನು ಸೂಚಿಸಲು ಬಳಸಲಾಗಿರುತ್ತದೆ, ಆದರೆ ಅದು ಸಾಮಾನ್ಯವಾದ ಅರ್ಥದಲ್ಲಿ ಸಹ ಬಳಸಲ್ಪಡಬಹುದು. KJVಯಲ್ಲಿ "ಹೊಲೆ ಮಾಡುವಂಥದ್ದೂ ಯಾವದೂ" ಎಂದಿರುತ್ತದೆ. ಈ ಮುಂಚೆ ಹೇಳಿದ ಪ್ರಕಾರ, ಪರಲೋಕದಲ್ಲಿ **ಯಜ್ಞದ ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಯಾರಾರ ಹೆಸರುಗಳು ಬರೆದವೆಯೋ ಅವರು ಮಾತ್ರ** ಸೇರುವರು (20:12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

## ಅನ್ವಯಿಸುವಿಕೆ

### "ನೂತನಾಕಾಶಮಂಡಲವೂ ನೂತನಭೂಮಂಡಲವೂ" (ಅಧ್ಯಾಯ 21)

ಸಾಮಾನ್ಯವಾಗಿ ಪರಲೋಕದ ಕುರಿತು ಬೋಧಿಸುವದಕ್ಕೆ ಸಾಮಗ್ರಿಯ ಕೊರತೆಯಂತೂ ಇರುವದಿಲ್ಲ[23] ಅಥವಾ ನಿರ್ದಿಷ್ಟವಾಗಿ ಪ್ರಕಟನೆ 21ನೇ ಅಧ್ಯಾಯದ ಕುರಿತು ಬೋಧಿಸಲು ಸಾಮಗ್ರಿಯ ಕೊರತೆಯಿರುವದಿಲ್ಲ. ಅಲ್ಲದೆ ಸಂಭಾವ್ಯ ಶಿರ್ಷಿಕೆಗಳಿಗೆ ಸಹ ಕೊರತೆಯಿರುವದಿಲ್ಲ: "ನೂತನಾಕಾಶಮಂಡಲ ಮತ್ತು ನೂತನ ಭೂಮಂಡಲ"; "ಎಲ್ಲಾ ನೆರವೇರಿತು"; "ಹೊಸದರ ವಾಗ್ದಾನ"; "ನಿಜವಾದ 'ಹೊಸ ಯುಗ.'" ನೀವು KJVಯನ್ನು ಬಳಸುವದಾದಲ್ಲಿ, ಒಂದು ಸಂದೇಶದ ಶಿರ್ಷಿಕೆಯು "ಇನ್ನು ಇಲ್ಲ" ಎಂದಾಗಿರಬಹುದು.

ವಾಕ್ಯಭಾಗದ ಚಿಕ್ಕ ಘಟಕಗಳು ಪಾಠಗಳಿಗೆ ತಳಹದಿಗಳಾಗಬಲ್ಲವು. 21:4ನ್ನು ಆರಂಭಿಕ ಅಂಶವಾಗಿ ಬಳಸುವ ಮೂಲಕ, ನೀವು "ಪರಲೋಕದಲ್ಲಿ ಇರಲಾರದ ಸಂಗತಿಗಳು" ಎಂಬದರ ಮೇಲೆ ಒಂದು ಪಾಠವನ್ನು ಬೋಧಿಸಬಹುದು (ನೋಡಿರಿ 21:1, 22, 23, 27; 22:3, 5). ನೀವು "ನರಕದಲ್ಲಿರುವ ಪ್ರಮುಖರು" ಎಂಬುದರ ಕುರಿತು ಬೋಧಿಸುವದಕ್ಕೆ 21:8ನೇ ವಚನವನ್ನ ಬಳಸಬಹುದು.

21 ಮತ್ತು 22 ಅಧ್ಯಾಯಗಳನ್ನು ಒಟ್ಟಾರೆಯಾಗಿ ಸಹ ಅಧ್ಯಯನ ಮಾಡಬಹುದು. Warren Wiersbeನು ಈ ಸಂಕ್ಷಿಪ್ತ ವಿವರಣೆಯನ್ನು ಹೊಂದಿದ್ದನು: (1) ಪಟ್ಟಣದ ಪೌರರು (21:1–8); (2) ಪಟ್ಟಣದ ಗುಣಸ್ವಭಾವ (21:9–22:9); (3) ಪಟ್ಟಣದ ಸವಾಲು (22:6–21).[24]

### ರಾಜ್ಯ (21:1-8)

ನೀವು "ಈಗ" ಮತ್ತು "ಆಗ" ಎಂಬ ನಕ್ಷೆಯನ್ನು ತಯಾರಿಸಲು ಬಯಸಬಹುದು, ಸಭೆ ಮತ್ತು ಪರಲೋಕದ - ಸರಳವಾಗಿ ಹೇಳುವದಾದರೆ, ಭೂಮಿಯ ಮೇಲಿರುವ ರಾಜ್ಯ ಹಾಗೂ ಪರಲೋಕದಲ್ಲಿರುವ ರಾಜ್ಯ - ನಡುವೆ ಹೋಲಿಕೆ ಮಾಡಬಹುದು. ಮೊದಲನೆ ಅಂಕಣದಲ್ಲಿ, ಸಭೆಯಲ್ಲಿ ಈಗ ಅನುಭವಿಸುತ್ತಿರುವ ಆಶೀರ್ವಾದಗಳ ಪಟ್ಟಿಯನ್ನು ಮಾಡಿರಿ. ಎರಡನೆಯ ಅಂಕಣದಲ್ಲಿ, ಆ ಆಶೀರ್ವಾದಗಳು ಪರಲೋಕದಲ್ಲಿ ಪೂರ್ಣವಾಗಿ ಹಾಗೂ ಪರಿಪೂರ್ಣವಾಗಿ ಸಾಕಾರಗೊಳ್ಳುವವು ಎಂಬುದನ್ನು ತೋರಿಸಿರಿ.

### ಪರಲೋಕಕ್ಕಾಗಿ ಹಂಬಲಿಸುತ್ತಿರುವದು (21:9-27)

James Roweನು "ಆತ್ಮದ ನಿವಾಸ"ದ ಕುರಿತು ಬರೆದನು:

ನಾವು ಬಹುಮಾನಕ್ಕಾಗಿ ಪ್ರಯಾಸ ಪಟ್ಟಿದ್ದರೆ,

ಪರಿಶ್ರಮಗಳು ತೀರಿದ ಮೇಲೆ,
ನಮ್ಮ ಆತ್ಮಗಳಿಗೆ ವಿಶ್ರಾಂತಿಯು ಕೊಡಲ್ಪಡುವದು,
ನಿತ್ಯವಾದ ದಡದಲ್ಲಿ.

ಆತ್ಮದ ನಿವಾಸ, ಸುಂದರವಾದ ನಿವಾಸ,
ಅಲ್ಲಿ ನಾವು ವಿಶ್ರಮಿಸುವೆವು, ಎಂದಿಗೂ ಅಲೆದಾಡದೆ;
ಎಲ್ಲಾ ಚಿಂತೆಯಿಂದ ಮುಕ್ತರಾಗಿ ಸಂತೋಷ ಹಾಗೂ ಪ್ರಜ್ವಲವಾಗಿ,
ಯೇಸು ಅಲ್ಲಿದ್ದಾನೆ, ಆತನೇ ಬೆಳಕು! ...[25]

ಪ್ರಕಟನೆ 21:9-27ರಲ್ಲಿ ಕಂಡು ಬರುವ ಪ್ರಕಾರ, "ಆತ್ಮದ ನಿವಾಸ"ದ ಗುಣಗಳ ಬಗ್ಗೆ ಅಧ್ಯಯನ ಮಾಡುವ ವೇಳೆ, ಅಲ್ಲಿ ಸಾಂಕೇತಿಕ ಭಾಷೆಯು ಬಳಸಲ್ಪಟ್ಟಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನೀವು ಒಬ್ಬ New Guineaದ ಸ್ಥಳೀಯನಿಗೆ ಒಂದು Eskimo ಜೋಪಡಿಯು ಹೇಗಿರುತ್ತದೆಂಬುದನ್ನು ಹೇಗೆ ವಿವರಿಸಬಲ್ಲಿರಿ? ನೀವು Minnesotaದ ಕೆರೆಗಳ ಬಗ್ಗೆ ಒಬ್ಬ ಮರುಭೂಮಿಯಲ್ಲಿ ಅಲೆಮಾರಿಯಾಗಿರುವವನಿಗೆ ಹೇಗೆ ವರ್ಣಿಸಬಲ್ಲಿರಿ?[26] ನೀವು ಒಂದು ಅಂತಸ್ತಿಗಿಂತಲೂ ದೊಡ್ಡದಾದ ಕಟ್ಟಡವೊಂದನ್ನು ಎಂದಿಗೂ ನೋಡಿಯೇ ಇಲ್ಲದ ಚಿಕ್ಕ ಬಾಲಕನೊಬ್ಬನಿಗೆ ಹೇಗೆ New York City ಪಟ್ಟಣವನ್ನು ವರ್ಣಿಸಬಲ್ಲಿರಿ? ಪ್ರತಿಯೊಂದು ಪ್ರಕರಣದಲ್ಲಿಯೂ, ನಿಮ್ಮ ಬಣ್ಣನೆಯು ಅವರು ಜೀವಿತದಲ್ಲಿ ಅನುಭವ ಮಾಡಿರುವ ಸಂಗತಿಗಳನ್ನಾಧರಿಸಿ ಇರಲಿದೆ - ಮತ್ತು, ಪ್ರತಿಯೊಂದು ಪ್ರಕರಣದಲ್ಲಿ, ನಿಮ್ಮ ಬಣ್ಣನೆಯು ವಾಸ್ತವಿಕತೆಗಿಂತ ಕಡಿಮೆಯಾಗಿ ಕಾಣುವದು. ಯೋಹಾನನು ಪರಲೋಕವನ್ನು ಬಣ್ಣಿಸುವದಕ್ಕೆ ಪ್ರಯತ್ನಿಸಿದಾಗಲೂ ಅದು ಅಷ್ಟೇ ಸತ್ಯವಾಗಿತ್ತು.

ವರ್ಷಗಳ ಹಿಂದೆ, ಒಂದು ಕ್ರೈಸ್ತ ಕುಟುಂಬದಲ್ಲಿ ಒಬ್ಬ ಸುಂದರವಾದ ಹೆಣ್ಣು ಕೂಸು ಹುಟ್ಟಿತ್ತು. ಹಲವಾರು ವಾರಗಳ ಬಳಿಕ, ಆಕೆಯ ಹೆತ್ತವರಿಗೆ ಆಕೆಯಲ್ಲಿ ದೃಷ್ಟಿದೋಷವಿರುವದು ಗೊತ್ತಾಗಿತ್ತು. ಒಬ್ಬ ನೇತ್ರಶಾಸ್ತ್ರಜ್ಞನು ಅವರಿಗೆ ಹೀಗೆ ಹೇಳಿದನು, "ನಿಮ್ಮ ಮಗಳಾದ ಮೇರಿ ಕುರುಡಳಾಗಿದ್ದಾಳೆ. ಆಕೆಯು ಇನ್ನೆಂದೂ ನೋಡುವದಕ್ಕೆ ಶಕ್ತಳಾಗದೆ ಇರಬಹುದು." ಬಳಿಕ ಆತನು ಇನ್ನೂ ಹೇಳಿದ್ದೇನೆಂದರೆ, "ಆದರೆ ಆಕೆಗೆ ಹನ್ನೆರಡು ವರ್ಷವಾಗುವ ವೇಳೆ, ಒಂದು ಶಸ್ತ್ರ ಚಿಕಿತ್ಸೆಯಿಂದ ಆಕೆಗೆ ಮರಳಿ ಸಾಮಾನ್ಯವಾದ ದೃಷ್ಟಿಯು ಬರಬಹುದಾದ ಸಾಧ್ಯತೆಯಿದೆ."

ಮೇರಿಯ ಹೆತ್ತವರು ಆ ಹನ್ನೆರಡು ಸುದೀರ್ಘವಾದ ವರ್ಷಗಳಿಗಾಗಿ ಕಾಯುತ್ತಿರುವ ವೇಳೆ ಅವರಿಗೆ ಹೇಗನ್ನಿಸಿರಬಹುದೆಂಬುದನ್ನು ನೀವು ಊಹಿಸಿಕೊಳ್ಳಬಹುದು. ಮೇರಿಯು ಕೊನೆಗೂ ಹನ್ನೆರಡು ವಯಸ್ಸನ್ನು ತಲುಪಿದಾಗ, ಅವರು ಯೂರೋಪಿನ ಪ್ರಖ್ಯಾತ ನೇತ್ರ ಶಸ್ತ್ರಚಿಕಿತ್ಸಕನನ್ನು ವ್ಯವಸ್ಥೆ ಮಾಡಿದ್ದರು. ಪರ್ವತ ಶ್ರೇಣಿಗಳಲ್ಲಿದ್ದ ಒಂದು ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯು ನಡೆಯಲಿತ್ತು. ಸಿದ್ಧತೆಯ ವೇಳೆಯಲ್ಲಿ, ಮೇರಿಯ ತಾಯಿತು ಆಕೆಯನ್ನು ಹಿಡಿದುಕೊಂಡಿದ್ದಳು, ಮತ್ತು ಆಕೆಯ ಮನಸ್ಸನ್ನು ಬೇರೆ ಕಡೆಗೆ ಸೆಳೆಯುವದಕ್ಕಾಗಿ, ಅವರ ಸುತ್ತಲು ಇದ್ದಂಥ ಭವ್ಯವಾದ ಪರ್ವತಗಳ ಕುರಿತು ಮಾತಾಡುತ್ತಿದ್ದಳು.

ಶಸ್ತ್ರಚಿಕಿತ್ಸೆಯ ನಂತರದಲ್ಲಿ, ಹೆತ್ತವರು, ಶಸ್ತ್ರಚಿಕಿತ್ಸೆಗಾರನು, ಮತ್ತು ಆಯಾಗಳು ಬಹಳ ಕಾತುರದಿಂದ ಕಾಯುತ್ತಿದ್ದರು. ಅಂತಿಮವಾಗಿ, ಕಣ್ಣಿನ ಪಟ್ಟಿಗಳನ್ನ ಬಿಚ್ಚಬೇಕಾದ ಸಮಯವು ಬಂದಿತ್ತು. ಮೇರಿಯು ನೋಡಿದ ಮೊಟ್ಟಮೊದಲ ಸಂಗತಿಗಳಲ್ಲೊಂದು ಎಂದರೆ ತನ್ನ

ಕೋಣೆಯ ಕಿಟಕಿಯ ಹೊರಗಿದ್ದ ವೈಭವವಾದ ಪರ್ವತವಾಗಿತ್ತು. ಆಕೆಯ ಕೆನ್ನೆಯ ಮೇಲೆ ಕಣ್ಣೀರು ಸುರಿಯುತ್ತಿರಲು, ಆಕೆಯು ತನ್ನ ತಾಯಿಗೆ, "ಅಮ್ಮಾ, ಈ ಲೋಕವು ಇಷ್ಟೊಂದು ಸುಂದರವಾಗಿದೆ ಎಂದು ನನಗೆ ಏಕೆ ಹೇಳಲಿಲ್ಲ?" ಎಂದು ಕೇಳಿದಳು. ಮೇರಿಯ ತಾಯಿಯು ಆಕೆಯ ಬಾಹುಗಳನ್ನು ಒಟ್ಟಾಗಿ ಹಿಡಿದುಕೊಂಡು ಹೀಗೆ ಹೇಳಿದಳು "ಮೇರಿ, ನಾನು ನಿನಗೆ ಹೇಳುವದಕ್ಕೆ ಪ್ರಯತ್ನಿಸಿದೆನು, ಆದರೆ ನನಗೆ ಅದು ಸಾಧ್ಯವೇ ಆಗಲಿಲ್ಲ!"[27]

ಅದೇ ರೀತಿಯಲ್ಲಿಯೇ, ವಿಮೋಚಿಸಲ್ಪಟ್ಟ ದೇವರ ಮಕ್ಕಳು ಮಹಿಮೆಯ ಮನೆಗೆ ಸೇರಿಸಲ್ಪಟ್ಟ ಮೇಲೆ, ನಾವು ಹೀಗೆ ಹೇಳುವೆವು, "ಸಹೋದರ ಯೋಹಾನನೇ, ಇಲ್ಲಿ ಮೇಲ್ಗಡೆ ಇಷ್ಟೊಂದು ಸುಂದರವಾಗಿದೆ ಎಂದು ನೀನು ಏಕೆ ನಮಗೆ ಹೇಳಲಿಲ್ಲ?" ಎಂದು ಕೇಳುವೆವು. ಆತನು ನಮಗೆ ಹೀಗೆ ಉತ್ತರಿಸುವನು, "ಚಿಕ್ಕ ಮಕ್ಕಳೇ, ನಾನು ನಿಮಗೆ ಪ್ರಕಟನೆ ಪುಸ್ತಕದಲ್ಲಿ ಹೇಳುವದಕ್ಕೆ ಪ್ರಯತ್ನಿಸಿದೆನು, ಆದರೆ ನನಗೆ ವರ್ಣಿಸುವದಕ್ಕೆ ಸಾಧ್ಯವಾಗಲೇ ಇಲ್ಲ!"

ನೀವು ಎಂದಾದರೂ ಮನೆಗಾಗಿ ಹಂಬಲಿಸುವಿರೊ? ಒಂದು ಅಧಿಕ ಪ್ರಾಮುಖ್ಯವಾದ ಪ್ರಶ್ನೆಯೊಂದು ಇಲ್ಲಿದೆ: ನೀವು *ಪರಲೋಕಕ್ಕಾಗಿ* ಹಂಬಲಿಸುತ್ತೀರುವಿರೋ? James Roweನ ಸಂಕೀರ್ತನೆಯು ಈ ಮಾತುಗಳನ್ನೊಳಗೊಂಡಿದೆ: "ಅನೇಕ ಸಾರಿ, ಬಿರುಗಾಳಿಯಲ್ಲಿದ್ದವರಾಗಿ, ಏಕಾಂಗಿಗಳಾಗಿದ್ದು, ಮನೆಗೋಸ್ಕರ ಹಂಬಲಿಸುತ್ತಾ, ನಿನಗಾಗಿ ಹಾತೋರೆಯುತ್ತೇವೆ."

## ಆತ್ಮದ ನಿವಾಸ (21:9-21)

21:9-11ರ ಮೇಲಿನ ಪಾಠಕ್ಕಾಗಿ ಹಲವಾರು ಬಿರುದುಗಳನ್ನು ಬಳಸಬಹುದು: "ಪರಲೋಕದ ಒಂದು ಪರ್ವತದ ಮೇಲಿನ ದೃಶ್ಯ"; "ನಿತ್ಯವಾದ ಪಟ್ಟಣ"; "ಮರಳಿ ಪಡೆದ ಪರದೈಸ್"; "ಮನೆಗೆ ಮರಳಿ ಬರುವದು"; "ನಾನು ಮನೆಗೆ ಹೋಗಲಿಚ್ಛಿಸುತ್ತೇನೆ!" ಇನ್ನೊಂದು ವಿಚಾರವು ಹೀಗಿರುತ್ತದೆ: ಪರಲೋಕವು ಆತ್ಮದ ನಿವಾಸವಾಗಿದ್ದು ಅದು (1) ಸೌಂದರ್ಯದಲ್ಲಿ ಉಜ್ವಲವಾಗಿರುವಂಥದ್ದು (21:9–21), (2) ಪ್ರಭಾವದಿಂದ ಹೊಳೆಯುವಂಥದು (21:22–27), ಮತ್ತು (3) ಪ್ರೀತಿಯಿಂದ ಪೂರ್ತಿ ತುಂಬಿರುವಂಥದು (22:1–5).[28]

## ಮುತ್ತುಗಳು (21:21)

ಅನೇಕ ಲೇಖಕರು ಮುತ್ತುಗಳನ್ನು ಶ್ರಮೆಯಿಂದ ಉತ್ಪಾದಿಸಲ್ಪಡುವ ಏಕೈಕ ಆಭರಣ ಎಂದು ಬಣ್ಣಿಸುತ್ತಾರೆ: ಸಿಂಪಿಯ ಒಳಗೆ ಒಂದು ಮರಳಿನ ತುಂಡು ಸೇರಿಕೊಳ್ಳುತ್ತದೆ, ಮತ್ತು ಸಿಂಪಿಯು ನೋವನ್ನು ಶಮನ ಮಾಡಿಕೊಳ್ಳುವ ಪ್ರಯತ್ನದಲ್ಲಿ ಕವಚವನ್ನು ಉಜ್ಜಿ ಸವೆಸುತ್ತದೆ. ಅವುಗಳು ಪರಲೋಕದಲ್ಲಿ ಪ್ರವೇಶಿಸುವದಕ್ಕೆ ("ಮುತ್ತಿನ ಬಾಗಿಲುಗಳ" ಮುಖಾಂತರ) ಯಾವ ಮಾರ್ಪಾಡೂ ಇಲ್ಲದೆ ಶ್ರಮೆಯು ಅಗತ್ಯವಿರುತ್ತದೆ: ಯೇಸುವಿನ ಶ್ರಮೆ, ಮತ್ತು ಅನೇಕ ಸಾರಿ ಆತನ ಹೆಜ್ಜೆ ಜಾಡುಗಳಲ್ಲಿ ನಡೆಯುವವರ ಶ್ರಮೆ.

---

### ಅಡಿಟಿಪ್ಪಣಿಗಳು

[1]Batsell Barrett Baxter, *If I Be Lifted Up* (Nashville: Gospel Advocate Co., 1956), 115. [2]Daniel Russell, *Preaching the Apocalypse* (New York: Abingdon Press, 1935), 235. [3]Harold Hazelip, *The Lord Reigns: A Survey of the Book of Revelation* (Abilene, Tex.: Herald of Truth, n.d.), 22. [4]Homer Hailey, *Revelation: An Introduction and Commentary* (Grand Rapids, Mich.: Baker Book House, 1979), 404. [5]Ibid., 405–6. [6]Albert H. Baldinger, *Preaching From Revelation: Timely Messages for Troubled Hearts* (Grand Rapids, Mich.: Zondervan Publishing

House, 1960), 122. [7]"ಹೊಸದಾಗಿ ಹುಟ್ಟುವಿಕೆ" ಶಾರೀರಿಕವಾದದ್ದಾಗಿರುವದಿಲ್ಲ ಎಂಬುದರ ಒಂದು ಚರ್ಚೆಯು Hugo McCord, *The Royal Route of Revelation* (Nashville: 20th Century Christian, 1976), 49ದಲ್ಲಿ ಕಾಣಿಸಿಕೊಳ್ಳುತ್ತದೆ. [8]Leon Morris, *Revelation,* rev. ed., The Tyndale New Testament Commentaries, ed. Leon Morris (Grand Rapids, Mich.: Wm. B. Eerdmans Publishing Co., 1987), 237. [9]G. B. Caird, *A Commentary on the Revelation of St. John the Divine*, Harper's New Testament Commentaries, ed. Henry Chadwick (London: Adam & Charles Black, 1966), 263. [10]Frank Pack, *Revelation,* Part 2 (Austin, Tex.: R. B. Sweet Co., 1965), 61.

[11]Morris, 236. [12]William Hendriksen, *More Than Conquerors* (Grand Rapids, Mich.: Baker Book House, 1954), 240. [13]Robert H. Mounce, *The Book of Revelation,* The New International Commentary on the New Testament, ed. F. F. Bruce (Grand Rapids, Mich.: Wm. B. Eerdmans Publishing Co., 1977), 378. [14]Alfred Plummer, *Revelation,* The Pulpit Commentary*,* ed. H. D. M. Spence and Joseph S. Exell, vol. 22 (Grand Rapids, Mich.: Wm. B. Eerdmans Publishing Co., 1950), 510. [15]The last two sentences were adapted from D. T. Niles, *As Seeing the Invisible: A Study of the Book of Revelation* (New York: Harper & Brothers, Publishers, 1961), 94. [16]Joe D. Jones, *Victory in Jesus* (Searcy, Ark.: By the author, 1990), 305. [17]Ibid. [18]Quoted in Herbert V. Prochnow, *A Dictionary of Wit, Wisdom, & Satire* (New York: Popular Library, 1964), 129. [19]"Home, Sweet Home," from the opera *Clari, the Maid of Milan* (1823). Quoted in John Bartlett, *Bartlett's Familiar Quotations,* 16th ed., ed. Justin Kaplan (Boston: Little, Brown, and Co., 1992), 405. [20]Morris, 244.

[21]Burton Coffman, *Commentary on Revelation* (Austin, Tex.: Firm Foundation Publishing House, 1979), 494. [22]Adapted from H. L. Ellison, *1 Peter—Revelation*, Scripture Union Bible Study Books (Grand Rapids, Mich.: Wm. B. Eerdmans Publishing Co., 1969), 88. [23]One good source is Coffman, 490–97. [24]Warren W. Wiersbe, *The Bible Exposition Commentary*, vol. 2 (Wheaton, Ill.: Victor Books, 1989), 621–26. [25]James Rowe, "Home of the Soul," *Songs of Faith and Praise,* comp. and ed. Alton H. Howard (West Monroe, La.: Howard Publishing Co., 1994). [26]ಮೊದಲ ಎರಡು ಪ್ರಶ್ನೆಗಳು Jimmy Jividen, "Homesick for Heaven," *Abilene Christian University Lectures* (1980): 54ದಿಂದ ಆಯ್ದುಕೊಳ್ಳಲ್ಪಟ್ಟಿವೆ. [27]ಮೇರಿಯ ಕಥೆಯು W. B. West, Jr., *Revelation Through First-Century Glasses*, ed. Bob Prichard (Nashville: Gospel Advocate Co., 1997), 150ದಿಂದ ಆಯ್ದುಕೊಳ್ಳಲ್ಪಟ್ಟಿದೆ. [28]ಪರಲೋಕದ ಕುರಿತಾದ ಇನ್ನು ಕೆಲವು ಪಾಠಗಳಿಗಾಗಿ, ನೋಡಿರಿ David Roper, "How To Enjoy Heaven," in the book *"The Day Christ Came (Again)" and Other Sermons,* and "The Night I Went to Heaven," published in tract form by the Haun Publishing Company.